ಕೊರವಂಜಿ



Koravan

ಜನವ

೧೯೫೮

★

ಸಂಪಾದಕರು :

ಶ್ರೀ|| ರಾ. ಶಿ.

ಬರಹಗಾರರು :

ಶ್ರೀಮತಿ|| ಸುನಂದಮ್ಮ

ಶ್ರೀಮತಿ|| ರಮಾಮಣಿ

ಶ್ರೀ|| ಕಾಮತ್

ಶ್ರೀ|| ನಾ. ಕ.

ಶ್ರೀ|| ರಾಮಿ

ಶ್ರೀ|| ಅ. ರಾ. ಸೇ.

ಶ್ರೀ|| ಪಾರ್ಥಸಾರಥಿ

ಶ್ರೀ||| ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾದಿ.

ಬಿಡಿ ಪ್ರತಿ


For 3 way Beauty Treatment....
RAJA
SNOW
AMLA HAIR OIL, KASTURI SOAP
MANYAM & CO. BANGALORE MADRAS MADURAI BOMBAY.



ಮುಂಬಯಿ ಪ್ರಾಂತ್ಯಕ್ಕೆ ಹಂಚಿಕೆದಾರರು :

ಶ್ರೀನಿವಾಸ ಪಿಕ್ಚರ್ಸ್, ಗದಗ.

ಕಟಕ

ಕೊರವಂಜಿ

A. ANANTHIAH.

ಸಂಪುಟ ೧೭ ಜನವರಿ ೧೯೫೮ ಸಂಚಿಕೆ ೧೦

ಕುಹಕಿಡಿಗಳು

ನಿನ್ನ ಗಂಡನಿಗೆ ಏನೇನು ಡಿಗ್ರಿ ಬಂದಿದೆಯೇ?

—ನೂರಾನಾಲ್ಕು ಡಿಗ್ರಿ ಬಂದಿದೆಯಮ್ಮ. ಅದಕ್ಕೇ ಆಸ್ಪತ್ರೆಗೆ ಬಂದಿದ್ದೇನೆ, ಎಂದಳಂತೆ ಉಷಾ ತನ್ನ ಸ್ನೇಹಿತೆ ಡಾ|| ಮನೋಹರಳಿಗೆ.

* * *

ಬೆಂಗಳೂರಿನಲ್ಲಿ ಅಖಿಲ ಭಾರತ ವೈದ್ಯ ವಾರ್ಷಿಕ ಸಮ್ಮೇಳನವು ಜರುಗಿದಾಗ, ಅಖಿಲ ಭಾರತದ ಆಯಾ ಊರಿನವರು ಅಲ್ಲಿನ ಸದಸ್ಯರನ್ನು ಚಂದಾ ಎತ್ತಿ ಕಳಿಸಿ ೪–೫ ದಿವಸ ಸುಖವಾಗಿದ್ದರು ಎಂಬುವುದು ಸುಳ್ಳಂತೆ.

* * *

ರಾಧಾಕೃಷ್ಣನ ಸಂಸಾರದಲ್ಲಿ ಬರೀ ಕಣ್ಣಾಮುಚ್ಚಾಲೆ ಆಟವೇನೇ! ಎಂದನಂತೆ ಶಾಮು ಕ್ಲಬ್ಬಿನಲ್ಲಿ.

—ಶಾಸ್ತ್ರಿ ಹೇಳಿದನಂತೆ. "ಇಲ್ಲದೆ ಇದ್ದರೆ, ರಾಧೆಗೆ ಕೃಷ್ಣನ ಆಟ, ಕೃಷ್ಣನಿಗೆ ರಾಧೆಯ ಮಾಟ ತಿಳಿದುಬಿಟ್ಟರೆ ಸಂಸಾರ ಚಟ್ಟ" ಎಂದು.

* * *

ಅಖಿಲ ಭಾರತ ದೇವಸ್ಥಾನಗಳ ದೇವರುಗಳೆಲ್ಲರೂ ಕಲ್ಯಾಣ ನಗರದಲ್ಲಿ ಈ ವರ್ಷ ಸಭೆ ಸೇರಿ ತಮ್ಮ ಹಕ್ಕುಬಾಧ್ಯತೆಗಳಿಗಾಗಿ ಠರಾವು ಮಾಡುತ್ತಾರೆಂಬುದು ದಿಟವಲ್ಲವಂತೆ.

—ಅವರುಗಳಿಗೆ ಸಮ್ಮೇಳನ ನಡೆಸಲು ಸ್ಥಳಾವಕಾಶ ದೊರೆಯಲಿಲ್ಲವಂತೆ!!

ಅಖಿಲಭಾರತ ನ್ಯಾಯವಿದ್ಯಾ ಶಿಕ್ಷಕರ ಸಮ್ಮೇಳನವು ಬೆಂಗಳೂರಿನಲ್ಲಿ ನಡೆಯಿತಂತೆ.

—ಕಾನೂನು ಪ್ರಕಾರ ಇದನ್ನು ನಡೆಸಬಹುದೋ ಇಲ್ಲವೋ ಎಂದು ಮೊದಲು ಚರ್ಚೆಯಾಗಿ ನಂತರ ಆರಂಭಿಸಿದರು ಎನ್ನುವುದು ಶುದ್ಧ ಸುಳ್ಳು!!

* * *

ಏಷ್ಯನ್ ಫ್ಲೂ ಬರುತ್ತೆ ಬರುತ್ತೆ ಎಂದು ಹೆದರಿ ಸಾಕಷ್ಟು ಪೆನಿಸಿಲಿನ್ ಚುಚ್ಚಿಸಿಕೊಂಡ ರಾಜಕಾರಿಣಿ, ಪಕ್ಷದ ಸಭೆಯಲ್ಲಿ ಸೀನುತ್ತಾ ಹೇಳಿದನಂತೆ.

—"ನಾನು ಸೀನಿದರೆ ಇತರರ ಫ್ಲೂ ವಾಸಿಯಾಗಬಹುದು ಈಗ" ಎಂದು.

* * *

ಕೇಂದ್ರ ಆರೋಗ್ಯ ಸಮಿತಿಯು ಬೆಂಗಳೂರಿನಲ್ಲಿ ಜನವರಿ ೫ ರಿಂದ ಶುರುವಾಗಬೇಕಾಗಿದೆಯಂತೆ.

—ಸದಸ್ಯರೆಲ್ಲರೂ ಅತನಕ ಆರೋಗ್ಯದಿಂದಿರಲಿ ಎಂದು ಕ್ರಿಸ್‌ಮಸ್ ಹಬ್ಬದಂದು ಚರ್ಚುಗಳಲ್ಲಿ ಪ್ರಾರ್ಥನೆ ನಡೆಸಿದರೆಂಬುದು ಬರೀ ಕುಹಕ!!

* * *

"ಇದು ಕೇಳಿದಿರಾ ಅಂದ್ರೆ" ಅಂತ ಹೆಂಡತಿ ಕಛೇರಿಯಿಂದ ಸುಸ್ತಾಗಿ ಬಂದ ಗಂಡನನ್ನು ಕೇಳಿದಾಗ, ಪಾಪಿ ಅಂದನಂತೆ "ನೀನು ಹೇಳುವುದಕ್ಕೆ ಮೊದಲೇ ಕೇಳಿಸಿತು ಕಾಣೆ, ಕಾಫೀ ಇದೆಯೇ?" ಎಂದು.

* * *

ಅಖಿಲ ಭಾರತ ಅಂಕಿ ಅಂಶಕಾರರ ಸಮ್ಮೇಳನಕ್ಕೆ ಬೆಂಗಳೂರಿನವರು ಸಿದ್ಧತೆ ಪಡಿಸಿಕೊಳ್ಳುತ್ತಿದ್ದಾರಂತೆ.

—ಭಾರತದಲ್ಲಿ ಈ ಸಮ್ಮೇಳನಕ್ಕೆ ಬೆಂಗಳೂರು ಲಾಯಖ್ಖೇ ಎಂಬುದನ್ನು ತೀರ್ಮಾನಿಸಲು ಪೂರ್ವಭಾವಿಯಾಗ ಅಂಕಿಅಂಶಗಳ ತನಿಖೆ ನಡೆಸುತ್ತಿದ್ದಾರೆಂಬುದು ಹುಚ್ಚರ ಮಾತು ಅಷ್ಟೇ!!

* * *

ಅಳುಮುಂಜಮ್ಮ, ಕೊರವಂಜಮ್ಮ ದೇವಸ್ಥಾನದ ಅಂಗಳದಲ್ಲಿ ಸಂಧ್ಯಾಕಾಲದಲ್ಲಿ ಭೇಟಿಯಾದರಂತೆ.

—ಕೊರವಂಜಿ ಅಂದಳಂತೆ—ದುಃಖ ಬಂದಾಗ ನೀನು ಸುಖವಾಗಿ ಅಳಬಹುದು ಕಾಣೇ—ಆದರೆ ಸುಖ ಪಟ್ಟಬೇಕಾದರೆ ಇಬ್ಬರಿರಬೇಕಲ್ಲವೇನೇ?" ಎಂದು.

ಉರಿಗಾಳು

ತನ್ನ ಕೈಯಿಂದ ಉತ್ತಮ ಕಾದಂಬರಿಕಾರ ಎಂದು ಎನಿಸಿಕೊಳ್ಳಲು ಸಾಧ್ಯವೇ ಇಲ್ಲ, ಎಂದು ಪತ್ತೆ ಹಚ್ಚುವುದಕ್ಕೆ ಒಬ್ಬ ಸಾಹಿತಿಗೆ 25 ವರ್ಷ ಹಿಡಿಯಿತಂತೆ! ಆದರೆ, ಅಷ್ಟು ಹೊತ್ತಿಗೆ, ಆತ ಸುಪ್ರಸಿದ್ಧ ಕಾದಂಬರಿಕಾರ ಎಂದೆನಿಸಿಕೊಂಡು ಬಿಟ್ಟಿದ್ದ, ಜನತೆಯ ಬಾಯಲ್ಲಿ!

* * *

ರಾಜಕೀಯ ರಂಗದಲ್ಲಿ ಪ್ರಮುಖರಾದವರಿಗೆ "ಡಾಕ್ಟರ್" ಡಿಗ್ರಿ ಉಚಿತವಾಗಿ ಕೊಡುವುದಕ್ಕಾಗಿಯೇ, ಭಾರತದಲ್ಲಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ನಡೆಸುವ ಯೋಜನೆ ಇದೆಯಂತೆ. ಈಗಿನ ಏರ್ಪಾಡಿನಂತೆ, ಎಲ್ಲರಿಗೂ ಆ ಗೌರವ ಪದವಿ ದೊರೆಯುತ್ತಿಲ್ಲವೆಂಬ ದೂರನ್ನು ಈ ಕ್ರಮದಿಂದ ಪರಿಹಾರ ಮಾಡಬಹುದಾಗಿದೆ.

* * *

ಅಮೇರಿಕಾದಲ್ಲಿ ಶಿಶುಗಳು ಈಚೀಚೆಗೆ ಅಂಬೆಕಾಲಿಕ್ಕಿದ ಕೂಡಲೇ, ಕಾರ್ ಡ್ರೈವಿಂಗ್ ಕಲಿತು, ನಡೆಯುವುದನ್ನೇ ಅಭ್ಯಾಸಮಾಡುತ್ತಿಲ್ಲವಂತೆ....

* * *

ತೀರ ಬಡವನಾಗಿ ಕಂಡ ಒಬ್ಬ ಸದ್ಗೃಹಸ್ಥ! ಚಿಂದಿ ಉಟ್ಟಿದ್ದರೂ ಮುಖದಲ್ಲಿ ತೇಜಸ್ಸಿತ್ತು! ಆದ್ದರಿಂದ, ಅವನ ಕೈಗೆ ಒಂದು ರೂಪಾಯಿ ಇತ್ತು, "ಏನ್ರಿ! ನೀವೊಂದು ಕಾಲದಲ್ಲಿ ಶ್ರೀಮಂತರಾಗಿರಬೇಕು. ಈ ಬಡತನಕ್ಕೇಕೆ ಇಳಿದಿರಿ?" ಎಂದಾಗ, ಅವರಂದ್ರಂತೆ, "ಹೀಗೆ ನಿಮ್ಮಹಾಗೆ, ಕಾಲಾಣೆ ಕೊಡಬೇಕಾದ ಕಡೆ, ಒಂದು ರೂಪಾಯಿ ಕೊಟ್ಟು ಕೊಟ್ಟು...."—ಅಂತ!

* * *

ಪಕ್ಕದಲ್ಲಿ ಒಂದು ಹೋಟೆಲ್ ಪ್ರಾರಂಭವಾಗಿದೆಯಲ್ಲಾ .. ನಿಮ್ಮ ಅಂಗಡಿ ವ್ಯಾಪಾರ ಈಗ ಹೇಗಿದೆ? – ಎಂದಾಗ, ಶೆಟ್ಟರು ಹೇಳಿದರಂತೆ, ಶುಂಠಿ ವೊರಬ್ಬಕ್ಕೆ ಒಳ್ಳೆ ಗಿರಾಕಿ ಇದೆ, ಅಂತ.

* * *

ಸತ್ಯವಾಗಿ ಹೇಳುತ್ತೇನೆ, ಪ್ರಪಂಚದಲ್ಲಿ ನಾನು ಗೌರವಿಸಿ ಆದರಿಸಿ ಶುಶ್ರೂಷಿಸುವುದು, ಒಬ್ಬನನ್ನೇ!—ಎಂದು ಹೇಳಿದ ಮಂತ್ರಿಗಳೊಬ್ಬರು, ಅನಂತರ ಸುಳ್ಳಿಗಿಳಿದು, ತನ್ನ ಹೆಸರನ್ನು ಹೇಳದೆ, ಮತ್ತೊಂದು ಹೆಸರನ್ನು ಹೇಳಿಬಿಟ್ಟರಂತೆ!

"ಕಷ್ಟಗಳು ಬಂದಾಗ, ಪುರುಷರಂತೆ ಅದನ್ನೆದುರಿಸಬೇಕು," ಎಂದು ಒಬ್ಬರು ಹೇಳಿದ ಆಪ್ತವಾಕ್ಯದ ಅರ್ಥ, "ತಪ್ಪು ಸ್ತ್ರೀಯರು ಎಂದು ಸಾಧಿಸಬೇಕು" ಎಂಬುದೇ ಅಂತೆ.

*　　　*　　　*

ಯಜ್ಞಯಾಗ ಹೋಮ ಇತ್ಯಾದಿಗಳಲ್ಲಿ ಅನ್ನ ತುಪ್ಪ ಹಾಳುಮಾಡಬೇಡಿ, ಎಂದು ಜವಾಹರಲಾಲರು ಹೇಳಿದ್ದು, ಟಿ. ಟಿ. ಕೆ. ಪದಚ್ಯುತಿಗಾಗಿ ಹಲವು ಶ್ರೀಮಂತರು ನಡೆಸುತ್ತಿರುವ ಯಜ್ಞವನ್ನುದ್ದೇಶಿಸಿ ಅಲ್ಲ ಎಂದು ನಮಗೆ ಗೊತ್ತಾಗಿದೆ.

*　　　*　　　*

"ನನ್ನ ಹೆಂಡತಿ ಎಷ್ಟು ಮಾತಾಡ್ತಾಳೆ ಮನೆಯಲ್ಲಿ, ನನಗೆ ಎಷ್ಟು ಅವಕಾಶ ಕೊಡ್ತಾಳೆ ಜವಾಬು ಹೇಳೋಕೆ,' ಅಂತ ಒಂದು ಉದಾಹರಣೆ ಮೂಲಕ ನಿಮಗೆ ತಿಳಿಸಿಬಿಡ್ತೇನೆ—ನಾನು "ಮೂಕ" ಎಂಬ ಗುಟ್ಟನ್ನ ಅವಳು ಇನ್ನೂ ಪತ್ತೆ ಹಚ್ಚಿಲ್ಲ" ಎಂದೊಬ್ಬರು ನಮಗೆ ಪತ್ರ ಬರೆದಿದಾರೆ.

*　　　*　　　*

1958—ಉಪಾಧ್ಯಾಯರುಗಳಿಗೆಲ್ಲ ಒಳ್ಳೆ ಸಂವತ್ಸ .. ಗುರುಬಲ ಚೆನ್ನಾಗಿದೆ ....ಈಗ ಸಿಗುತ್ತಿರುವ ಸಂಬಳದಲ್ಲೇ ಅವರು 58ರ ಪೂರ ಉಪವಾಸ ಜೀವನವನ್ನು ಯಾವ ಅಪಾಯವೂ ಇಲ್ಲದೆ ಮುಂದುವರಿಸಿಕೊಂಡ ಹೋಗಬಹುದೆಂದು ಇಲಾಖೆಯ ಹೋರಾಶಾಸ್ತ್ರಿಗಳು ಹೇಳುತ್ತಿದಾರೆ.

*　　　*　　　*

ಇಂಡಿಯಾದಿಂದ ಲಂಡನಿಗೆ ಸೂಯಜ್‌ಕಾಲುವೆ ಮೂಲಕ ಉದ್ದಕ್ಕೂ ಎಲ್ಲೂ ನಿಲ್ಲದೆ ಈಜುವ ಮೊದಲನೆಯ ಈಜುಗಾರನಿಗೆ 1 ಲಕ್ಷ ರೂಪಾಯಿ ಬಹುಮಾನ ಕೊಡುವುದಾಗಿ ಡಿಲ್ಲಿ ವರ್ತಕರೊಬ್ಬರು ನೆಹರು ಅವರಿಗೆ ಪತ್ರ ಬರೆದಿದಾರಂತೆ.

*　　　*　　　*

ಅಖಿಲ ಭಾರತ ನಾಪಿತರ ವಾರ್ಷಿಕ ಸಮ್ಮೇಳನವು ಈ ಸಾರಿ ಯಾವ ಊರಿನಲ್ಲಿ ಕೂಡ ನಡೆಯುವುದಿಲ್ಲವಂತೆ.

—ಸದಸ್ಯರೆಲ್ಲರೂ ಕೇಂದ್ರದ ಆರ್ಥಿಕ ಶಾಖೆಯಲ್ಲಿ ಕೆಲಸಕ್ಕೆ ಸೇರಿಕೊಂಡ ಕಾರಣದಿಂದ.

*　　　*　　　*

"Dearness allowance ಬೇಡ ಸಾರ್" ಇನ್ನುಮೇಲೆ, ಕಸಪರಿಕೆ ಅಲೋಯೆನ್ಸ್ ಕೊಡ್ಸಿಸಾರ್, ಅತ್ತೆ ನಮ್ಮನೆಗೆ ಮಗಳ ಜತೇಲಿ ಬಂದು ಒಂದು ತಿಂಗಳಾಯಿತು ಸಾರ್" ಎಂದು N. G. O. ಹೇಳಿದ್ದು ಖಚಿತವಲ್ಲವಂತೆ.

ಸಂತಾಪ ಸೂಚನೆ

ನಾವು ನಿಜಕ್ಕೂ ದೇಶಭಕ್ತರೇ, ಎಲ್ಲಾ ಸಮಾರಂಭಗಳನ್ನೂ — ಒಳ್ಳೆಯ ದಾಗಲೀ ಕೆಟ್ಟದ್ದಾಗಲೀ—ಎಲ್ಲವನ್ನೂ ತಪ್ಪದೇ ಆಚರಿಸುತ್ತೇವೆ, ನಮ್ಮ ಮಹಿಳಾ ಸಮಾಜದಲ್ಲಿ; ಗಾಂಧೀ ಜಯಂತಿ, ನೆಹರೂ ಹುಟ್ಟಿದ ದಿನ, ಬುದ್ಧನ ನಿರ್ಯಾಣದ ನೆನಪು, ಪಟೇಲರ ಸ್ಮಾರಕ, ಇತ್ಯಾದಿ, ಇತ್ಯಾದಿ....!

ಒಂದು ಹೆಮ್ಮೆಯ ಸುದ್ದಿಯೇನೆಂದರೆ, ಈ ದಿನಗಳಲ್ಲಿ ಮಹಿಳೆಯರು ಮಕ್ಕಳು ಮರಿಗಳೊಂದಿಗೆ, ತಂಡ ತಂಡವಾಗಿ ಬಂದು ನೆರೆಯುತ್ತಾರೆ. ಅದು, ನಾವು ಆ ದಿನ ಯಾವುದಾದರೂ ಸದಸ್ಯೆಯನ್ನು ಪೀಡಿಸಿ ಕಾಡಿಸಿ, ಕೊಡಿಸುವ ಚರುಪಿನ ಮಹತ್ವ ಎಂದು ನನ್ನ ಕುಹಕಿಗೆಳತಿ ಹೇಳಿದರೂ ನಾನು ಒಪ್ಪುವುದಿಲ್ಲ; (ಒಪ್ಪುವ ಹಾಗಿಲ್ಲ —ಸ್ವಯಂ ಕಾರ್ಯದರ್ಶಿಯಾಗಿ!)

ಮೊನ್ನೆ, ಭಾರತಾಂಬೆಯ ಸುಪುತ್ರ ಶ್ರೀಯುತ....... ರವರ ನಿಧನದ ಬಗ್ಗೆ ಸಂತಾಪಸೂಚಕ ಸಭೆ ಏರ್ಪಾಡಾಗಿತ್ತು. ಯಥಾಪ್ರಕಾರ, 'ಪ್ರಸಾದ'ದ ಅಸ್ತಿ ಭಾರದ ಮೇಲೆ 'ಸಮಾರಂಭ'ವು ಜಯಪ್ರದವಾಗಬೇಕಾದ್ದರಿಂದ, ಸದಸ್ಯೆಯೊಬ್ಬರ ಮೇಲೆ ಆ ಭಾರವನ್ನು ಹೇರಿದೆ—ಆಕೆಯದೇ ಷರತ್ತಿನ ಮೇಲೆ. ಅದೇನೆಂದರೆ, ಆ ದಿನ, ಆಕೆಯ ಕಿರಿಮಗಳ ನೃತ್ಯ ನಡೆಯಬೇಕೆಂದು. ಸಂತಾಪ ಸೂಚನಾ ಸಭೆಯಲ್ಲಿ ನೃತ್ಯವೇ ಎಂದು ಮೂಗು ಮುರಿದಳು ನನ್ನ ಕುಹಕಿ ಗೆಳತಿ. "ಭಯವಿಲ್ಲ, ಆ ದೇಶಭಕ್ತರ ಆತ್ಮ ಒಂದು ವೇಳೆ ಇನ್ನೂ ಇಲ್ಲೇ ಸುಳಿದಾಡುತ್ತಿದ್ದರೆ, ಆ 'ಗಜ ಗುಮರಿ'ಯ ಕುಣಿತ ನೋಡಲಾರದೆ ಶೀಘ್ರವಾಗೇ ಸ್ವರ್ಗ ಸೇರುವ ಸಂಭವವಿದೆ" ಎಂದು ಆಶ್ವಾಸನ ಕೊಟ್ಟೆ!

ಆ ದಿನದ ಸಭೆಗೆ ಶ್ರೀ.......ರಾಯರ ಧರ್ಮಪತ್ನಿಯನ್ನು ಅಧ್ಯಕ್ಷ ಪಟ್ಟಕ್ಕೆ ಆರಿಸಿದ್ದೆ. ಸಂಜೆ ಐದು ಗಂಟೆ ಹೊತ್ತಿಗೆ ಸಭಾಂಗಣ ಭರ್ತಿಯಾಯ್ತು—ಹೊಸ ಹೊಸ ಸೀರೆ, ಒಡವೆಗಳನ್ನು ಧರಿಸಿದ ಮಹಿಳೆಯರಿಂದ. ಅಲ್ರೀ, ಆಕೆಗೆ ಆರು ಹಾಳೆ ಭಾಷಣ ಬರೆದುಕೊಟ್ಟಿದ್ದಾನಂತೆ ಆತ, ನಮ್ಮನೆಯೋರು ಹೇಳಿದರು!" ಎಂದು ಒಬ್ಬಾಕೆ ಚಟಾಕಿ ಹಾರಿಸಿದಳು. "ಒಳ್ಳೇವರನ್ನೇ ಕರೆದಿದೀರಲ್ರೀ!" ಎಂದರು ನನ್ನನ್ನು ತೀಕ್ಷ್ಣ ದೃಷ್ಟಿಯಲ್ಲಿ ನೋಡುತ್ತಾ.

ನನಗೆ ನಿಜಕ್ಕೂ ಭಯವಾಯಿತು. ನಮ್ಮ ಸದಸ್ಯಣಿಯರಲ್ಲಿ ಒಂದೇ ಒಂದು ನ್ಯೂನತೆ. ಭಾಷಣ ದೀರ್ಘವಾಗತೊಡಗಿದರೆ, ಮೆಲ್ಲಗೆ ಮಕ್ಕಳನ್ನು ಅಳಿಸಿಬಿಡು ತ್ತಾರೆ! ಅಲ್ಲದೆ....ಆರು ಗಂಟೆಯಾದರೂ ಅಧ್ಯಕ್ಷಿಣಿ ಬರಲಿಲ್ಲ. ಸಾಲದ್ದಕ್ಕೆ ಹಾರ

ಬೇರೆ ಬಂದಿರಲಿಲ್ಲ. ಚಿರುಪಿನ ಗುಗ್ಗುರಿ ಹೆಳಸಲು ಹತ್ತಿರ ಬಂದಿದೆಯೆಂದು ಸದಸ್ಯಿಣಿ ಗೊಣಗತೊಡಗಿದಳು. ಬಳಿದ ಬಣ್ಣ ಕಳಗಿ ಹರಿಯುತ್ತಿದೆಯೆಂದು 'ಬಾಲೆ' ಮರುಗ ತೊಡಗಿದಳು. ಒಳಕ್ಕೆ ಮುಖವಿಟ್ಟರೆ ಮಾನಹಾನಿಯೆಂದು ಗೇಟಿನಲ್ಲೇ ಗಸ್ತು ತಿರುಗಲಾರಂಭಿಸಿದೆ!

ಸಧ್ಯಃ ಕಾರು ಬಂತು. ಆಕೆ ಇಳಿದಳು, ಸಾಲಂಕೃತೆಯಾಗಿ. ಜೊತೆಗೆ ಹಾರವೂ ಬಂತು ಅದೇ ಕಾರಿನಲ್ಲಿ—ನಮ್ಮ ಜವಾನ ಅದರೊಳಕ್ಕೇ ಏರಿದ್ದ ಅರ್ಧ ದಾರಿಯಲ್ಲಿ ಕಾರು ನಿಲ್ಲಿಸಿ!

'ಗಜಪುತ್ರಿ'ಯ ನೃತ್ಯ (?) ವಾದ ಮೇಲೆ ಸೂಕ್ತ ಮುನ್ನುಡಿಯೊಡನೆ ಆಕೆಗೆ ಬಿನ್ನವಿಸಿಕೊಂಡೆ—ಭಾಷಣವನ್ನು ದಯಪಾಲಿಸಲು, ಆಕೆ ಮಾತಾಡದೆ, ಗಂಭೀರ ಮುದ್ರೆಯಿಂದ, ತಲೆಯಲ್ಲಾಡಿಸಿದಳು. ಪಾಪ, ದೇಶಭಕ್ತರ ನಿಧನದ ದುಃಖದ ಭಾರಕ್ಕೆ ಈಕೆಗೆ ಮಾತೂ ಸಹ ಹೊರಡಲಾಗಿದೆಯಲ್ಲ ಎಂದು ಮಮ್ಮಲ ಮರುಗಿದೆ. ಅಷ್ಟರಲ್ಲಿ ಆಕೆ ಬಾಯಿಮುಚ್ಚಿಕೊಂಡು, ಬೆರಳೆರಡನ್ನು ಮೇಲೆತ್ತಿ ತೋರಿಸಿದಳು!

ಅದನ್ನು ನಾನು—ವಿದೇಶೀ ರಾಜಕಾರಣಿಗಳ ಭಾಷಾಂತರಕಾರ (Interpreters) ರಂತೆ ಅರ್ಥಮಾಡಿ, ಈ ರೀತಿ ವಿವರಿಸಿದೆ "ಅಧ್ಯಕ್ಷಿಣಿಯವರು ಅಪ್ಪಣೆ ಕೊಡಿಸುತ್ತಾರೆ, ಶ್ರೀ ....ರವರ ನಿಧನದಿಂದ ನನಗೆ ಅಪಾರ ದುಃಖವಾಗಿ ಮಾತಾಡಲಿಕ್ಕೆ ಬಾಯೇ ಬಾರದಾಗಿದೆ. ನಿಮ್ಮ ಮಹಿಳಾ ಸಮಾಜದ ಕಾರ್ಯ ಕಲಾಪಗಳನ್ನು ಮೆಚ್ಚಿ, ಎರಡು ನೂರು ರೂಪಾಯಿಗಳನ್ನು ಕೊಡಲಿದ್ದೇನೆ,"

ಸಭಿಕರಲ್ಲಿ ಹತ್ತು ನಿಮಿಷ ಪ್ರಚಂಡ ಕರತಾಡನವಾಯಿತು (ಭಾಷಣದ ಭೀತಿ ತಪ್ಪಿದ್ದಕ್ಕೇ ಇದ್ದೀತು ಮುಖ್ಯವಾಗಿ!).

ಆಕೆಯ ಕಡೆ ನೋಡಿದೆ. ಮುಖ ಕೆಂಪೇರಿ, ಬೆವರು ಹರಿಯುತ್ತಿತ್ತು. ಪಾಪ, ನೊಂದ ಜೀವಕ್ಕೆ ಹೆಚ್ಚು ಆಯಾಸ ಕೊಡಬಾರದೆಂದು, ಕೊರಳಿಗೆ ಹಾರ ಹೇರಿ, ಕಾರಿಗೆ ಸಾಗಿಸಿಬಿಟ್ಟೆ!

ಮಾರನೇ ದಿನ ಆತನಿಂದ ಪತ್ರಬಂತು "... ....ಏನೋ ಅವಳಿಂದಲಾದರೂ ನನ್ನ ಹೆಸರು—ಇಂಥವರ ಪತ್ನಿ ಎಂದು—ಪೇಪರಿನಲ್ಲಿ ಬರಲಿ ಎಂದು ಬಲವಂತ ಮಾಡಿ ಕಳಿಸಿದೆ, ವಿಪರೀತವಾದ ಹಲ್ಲು ನೋವಿನಿಂದ ನರಳುತ್ತಿದ್ದರೂ ಸಹ! ಅವಳು ಬಾಯಿ ತೋರಿಸಿ ಬೆರಳೆತ್ತಿದ್ದು, 'ನನಗೆ ಬಾಯಿಬಿಡಕ್ಕಾಗದು, ಎರಡು ಹಲ್ಲುಗಳನ್ನು ಇದೇ ತಾನೇ ಕೀಳಿಸಿದ್ದೇನೆ' ಎಂದು. ಅದನ್ನು ನೀವು ಅಪಾರ್ಥಮಾಡಿ ... ಶ್ರೀರಾಮಾ .....!"

— ಸುನಂದಮ್ಮ.

ಅವರಿವರ ಮನೆ ಊಟ

ಪರರ ಮನೆಯಲ್ಲಿ ಡಿನ್ನರೆಂದವನ ಕರೆದರೆ
ಕೂತು ತಿಂಬನು, ಭೂಪ, ಕಂಠಪೂರ್ತಿ!
ಬಡಿಸೆ ಬಡಿಸೆ ಅವಗೆ ತೇಗುಬಳ್ಳಿ
ಕಲಸಿ ಕಬಳವ ಮಾಡೆ ಬೇಸರಿಲ್ಲ—
ಆದರವನೇ ದಿನವು, ನರಸು ಅಡಿಗೆಯ ತಿನ್ನೆ
ತನ್ನ ಮನೆಯಲಿ ತಾನು ಕೂತನೆನ್ನಿ!
ಹುಳಿಗೆ ಉಪ್ಪೇ ಇಲ್ಲ, ಹೋಳು ಬೆಂದೇ ಇಲ್ಲ,
ಸಾರಲ್ಲಿ ತುಸು ಬೆರತ ಸೀದ ನಾತ!
ಅನ್ನ ಬೆಂದೇ ಇಲ್ಲ, ಚಟ್ನಿ ಒಂದೇ ಖಾರ,
ವಿಪರೀತ ಬಿಸಿಬಿಸಿ ಕುಡಿವ ನೀರು,
ಮೊಸರಲ್ಲೆಷ್ಟೋ ಕಲ್ಲು ಸಂಡಿಗೆಯೂ ಬರಿ ಮಣ್ಣು
ಹೋಟಲೂಟವೆ ವಾಸಿ ನೂರುಪಾಲು
ಟೀಕೆ ಮಾಡುತಲವನು, ಒಂದು ಸೇರನ್ನವನು,
ಅರೆಪಾವು ತುಪ್ಪದಲಿ ಕಲಸಿ, ಅದಕೆ
ಮಿಕ್ಸಿ ಕಾಯಿಯ ಚಟ್ನಿ, ಹಪ್ಪಳವ ಪುಡಿಮಾಡಿ ಅದನು ಬೆರೆಸಿ,
ಹೊಡೆಯುವನು, ಬಕನಂತೆ, ಬೈದು ಬೈದು!
ನರಸಮ್ಮ, ಕಣ್ಣಲ್ಲಿ ನೀರಸುರಿಸುತ ಕೂತು,
ಉಳಿದ ಸೇರನ್ನವನು ಉಳಿದ ಪಾವ್ ತುಪ್ಪವನು
ಅರೆದ ಚಟ್ನಿಯನೆಲ್ಲ, ಆರೇಳು ಹಪ್ಪಳವ,
ಖಾಲಿಮಾಡುತ ತೇಗಿ, ನಿದ್ದೆಮಾಳ್ಪಳು, ಸುಖದಿ.

—ರಮಾಮಣಿ.

ಸಿರಿಗನ್ನಡಂ

ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಅಂಗೀಕರಿಸಿ, ಪ್ರತಿನಿಧಿಸಭೆಗಳಲ್ಲಿ ಅದನ್ನು ಬಳಕೆಗೆ ತರುವುದಾದರೆ, ಕಾರ್ಯಕಲಾಪಗಳಿಗೆ ತುಂಬಾ ಅಡಚಣೆಯಾಗುವುದೆಂದೂ ಕನ್ನಡದಲ್ಲಿರುವಷ್ಟು ರಾಜಕೀಯ ಅನುಕೂಲಗಳು ಹಿಂದಿಯಲ್ಲಿಲ್ಲವೆಂದೂ, ಡಿಲ್ಲಿಗೆ ಪತ್ರ ಹೋಗಿದೆಯಂತೆ. ಈ ಪತ್ರದಲ್ಲಿ ಕಾಣಿಸಿರುವ ಮುಖ್ಯ ಅಂಶಗಳು ಇವು :

೧. ಮೊದಲನೆಯದಾಗಿ, ಕನ್ನಡದಷ್ಟು ನಿದ್ರಾ ಪ್ರೇರಕವಾದ ಭಾಷೆ ಮತ್ತೊಂದಿಲ್ಲ. ಸುಲಿದ ಬಾಳೆಯ ಹಣ್ಣಿನಂದದಿ, ಅಳಿದ ಉಷ್ಣದ ಹಾಲಿನಂದದಿ, ಮದುಮಧುರವಾದ, ಇಂಪು ತಂಪುಗಳಿಂದೊಡಗೂಡಿದ ಕನ್ನಡ ನುಡಿಯಲ್ಲಿ ಗಡಗಡನೆ ಮಾತಿನ ಮಳೆ ಸುರಿಯುತ್ತಿದ್ದರೆ, ಆ ಮಳೆಯ ಇಂಚರಕ್ಕೆ ಆ ಮೇಲು ದನಿಯ ಮಾಟಕ್ಕೆ, ಕಣ್ಣೆವೆ ಕೂಡುವುವು, ತಲೆ ಶಿರೋಭಾರವಾಗುವುದು, ಬಾಯಗಲಿ ಆಕಳಿಕೆ ಉತ್ಪತ್ತಿಯಾಗುವುದು, ನಿದ್ರಾಂಗನೆ ಬಳಿಗೆ ಸರಿಯುವಳು. ಸಂಶೋಧನೆಗಳನ್ನು ನಡೆಯಿಸಿ ಪರೀಕ್ಷಿಸಿದಾಗ, ಹಿಂದೀ ಭಾಷಣ ಕೇಳುತ್ತ ಕೇಳುತ್ತ 30 ನಿಮಿಷಗಳಲ್ಲಿ ಶೇಕಡ 50 ಜನ ಸದಸ್ಯರು ನಿದ್ದೆಮಾಡಿದರೆ, ಕನ್ನಡ ಭಾಷಣದಿಂದ ಅಷ್ಟೇ ಸದಸ್ಯ ರನ್ನು ನಿದ್ದೆಮಾಡಿಸಲು 18 ನಿಮಿಷಗಳು ಸಾಕಾಗುತ್ತದೆ, ಎಂದು ತಿಳಿದುಬಂದಿದೆ. ಇದು ಒಂದು ಅಮೂಲ್ಯ ಲಾಭ.

2. ಎರಡನೆಯದಾಗಿ,—ಯಾವ ವಿಷಯವನ್ನೂ ಹೊರಗೆಡಹದೆ, ಲೋಕಾಭಿ ರಾಮವಾಗಿ ಮಹಾ ಮೇಧಾವಿ ಎನಿಸುವಷ್ಟು ಪಾಂಡಿತ್ಯ ಪ್ರದರ್ಶನಮಾಡುತ್ತ, ಗಂಟೆಗಟ್ಟಲೆ ಮಾತನಾಡುವುದಕ್ಕೆ, ಕನ್ನಡವೇ ಉತ್ತಮ ಭಾಷೆ, ಎಂಬುದು ಇಲ್ಲಿಯ ವರಿಗೆ ಅನುಭವಸಿದ್ಧ!" ಇದುವರೆಗಿನ ನಮ್ಮ ಆರ್ಥಿಕ, ಸಾಮಾಜಿಕ, ಧಾರ್ಮಿಕ, ನೈತಿಕ, ವ್ಯವಸಾಯಿಕ ಅನುಭವಗಳನ್ನು ಕೂಲಂಕಶವಾಗಿ ಪರಾಮರ್ಶಿಸಿದರೆ, ನಿಷ್ಪಕ್ಷಪಾತವಾದ ಅಭಿಪ್ರಾಯಕ್ಕೆ ಬರಲು ಕಾತರರಾದ ಎಂಥವರಿಗೂ ಹೊಳೆಯುವು ದೇನೆಂದರೆ, ಸೋಲಿಗೆ ಕುಗ್ಗದ, ಗೆಲುವಿಗೆ ಹಿಗ್ಗದ, ಆದರೂ, ಸೋಲು ಗೆಲುವು ಗಳೆರಡನ್ನೂ ಸ್ವಾಗತಿಸುವ, ಬಸವಣ್ಣನವರು ಹೇಳಿದಂತೆ ಹೊನ್ನಶೂಲದಲಿರಿದರೂ ಕಬ್ಬೊನ್ನ ಶೂಲದಲಿರಿದರೂ ಒಂದೇ ಸಮನೆನಿಸುವ ತೀರ್ಮಾನಕ್ಕೆ ಬರುವುದೊಂದೇ ನಮ್ಮ ಮುಂದಿನ ಹಾದಿ"—ಇತ್ಯಾದಿ ಗಂಟೆಗಟ್ಟಲೆ ಲೀಲಾಜಾಲವಾಗಿ ಒದರಲು

ಅನುಕೂಲಿಸುವ ನಿರರ್ಥವಾಗ್ವೈಖರಿ ಭಾರತದ ಬೇರೊಂದು ನುಡಿಯಲ್ಲೂ ಅಷ್ಟಾಗಿಲ್ಲ ವೆಂದು ಎದೆಯ ಮೇಲೆ ಕೈ ಇರಿಸಿ ಹೇಳಬಹುದೆಂದರೆ ತಪ್ಪಾಗಲಾರದು, ಎಂದು ಆ ಪತ್ರದಲ್ಲಿ ನಮೂದಿಸಲಾಗಿದೆ.

3. ಮೂರನೆಯದಾಗಿ, "ಕನ್ನಡಂ ಕತ್ತುರಿ". ಉಳಿದ ಯಾವ ಭಾಷೆಗೂ ಈ ಶಕ್ತಿ ಇಲ್ಲ.

4. ನಾಲ್ಕನೆಯದಾಗಿ, "ಸಂಸ್ಕೃತದಲ್ಲಿನ್ನೇನು?" ಎಂದು ಕನ್ನಡ ಮಹಾ ಕವಿಯೊಬ್ಬ ಮೂದಲಿಸಿದಾನೆ. ಮೆಣಸುಂ ಮುತ್ತುಂ ಕೋದಂತೆ, ಮೆಣಸಾದಂತಹ ಸಂಸ್ಕೃತ, ಮುತ್ತಾದಂತಹ ಕನ್ನಡ, ಎರಡನ್ನೂ ಬೆರಸಬಾರದು, ಎಂದು ಕನ್ನಡ ವೈಯಾಕರಿಣಕರು ಸಾರಿದಾರೆ. ಇದರಿಂದ, ನಮಗೆ ತಿಳಿಯುವುದೇನೆಂದರೆ ಸಂಸ್ಕೃತವೇ ಮೆಣಸಾದ ಮೇಲೆ, ಅದರ ಶಿಶು ಹಿಂದಿ, ಮೆಣಸಿನಕಾಯಿ ಎಂಬುದು ನಿರ್ವಿವಾದ. ರಾಜಕೀಯಕ್ಕೂ ಮೆಣಸಿನಕಾಯಿಗೂ, ಬಹುದೂರ! ಮುತ್ತಿನ ಒಳರಾಜಕೀಯ, ಚಾಣಕ್ಯಾದಿಗಳೆಲ್ಲರಿಗೂ ವಿದಿತ.

—ಕಾಮತ್.



ನಮ್ಮ ಗಾಂಧಾರಿ—

ಪರೀಕ್ಷೆ ಮುಗಿಯೋತನಕ ನಿಮ್ಮನ್ನ ನೋಡೋದೇ ಇಲ್ಲ ಅಂತೇಳಿ ಅಮ್ಮನ ಮುಂದೆ Promise ಮಾಡಿದೇನ್ರಿ.

ಒಂದು ಕ್ಯಾಲೆಂಡರ್ ಕೊಡಿ, ಸಾರ್ !

ಹೊಸವರ್ಷ! ಜನವರಿ ಮೊದಲನೆಯ ವಾರ! ಸರಿ! ಇನ್ನು ಪ್ರಾರಂಭ ಮಾಡಬೇಕು, ಕ್ಯಾಲೆಂಡರ್ ಶೇಖರಣೆ!

ದಿನ, ತಾರೀಖು, ರಾಹುಕಾಲ ರಜಾದಿನ ಇದಿಷ್ಟನ್ನು ಮಾತ್ರ ಅಂದಂದು, ತಿಳಿದುಕೊಳ್ಳಬೇಕಾದರೆ, ಒಂದೇ ಸಲ ಒಂದು ಅಂಗಡಿ ಮಾಲೀಕನೆದುರು ಹಲ್ಲು ಕಿರಿದು, ಒಂದು ಕ್ಯಾಲೆಂಡರ್ ಪಡೆದು ತಂದು, ನೇತಾಡಿಸಿದರಾಯಿತು.

ಆದರೆ, ಈ ಕ್ಯಾಲೆಂಡರ್ ಬೇಟೆಯಲ್ಲಿ ಮನುಷ್ಯ, ಸ್ವಾಭಿಮಾನವನ್ನು ಸಂಪೂರ್ಣ ತೊರೆಯುತ್ತಾನೆ! ಬಾಲ ಆಡಿಸುತ್ತಾನೆ! ನಾಲಗೆ ನೀಡುತ್ತಾನೆ! ಇಲ್ಲ, ಹೋಗಿರಿ ಅಂತ ಒನಕೇಲಿ ಹೊಡೆದರೆ, ಕೊಂಯ್, ಕೊಂಯ್ ರಾಗ ಹಾಡುತ್ತಾನೆ!


ಕ್ಯಾಲೆಂಡರ್ ಸಂಪಾದನೆಗೆ ನಮ್ಮನ್ನ ಪ್ರೇರೇಪಿಸುವ ಶಕ್ತಿಗಳು ಬಹಳ. (1) ಮೊದಲನೆಯದಾಗಿ. ಅದು ನಮ್ಮ ಪ್ರತಿಷ್ಠೆಯ ಮಾತು. ನಮ್ಮವಳು ಹೇಳು ತ್ತಾಳೆ ನಮಗೆ: "ನೋಡಿ ಅಂದ್ರೆ, ಪಕ್ಕದ ಮನೆಯವರನ್ನ, ಬಸ್ ಕಂಡಕ್ಟರು ಆತ! ಬಾಡಿಗೆ ಮನೆಯಲ್ಲಿದಾನೆ! 3 ತಿಂಗಳಿಂದ ಬಾಡಿಗೆ ಕೊಟ್ಟಿಲ್ಲ! ಆದರೂ, ಆತ ಎಂಥೆಂಥ ಕ್ಯಾಲೆಂಡರ್ ಸಂಪಾದಿಸಿ ಗೋಡೆಗೆ ಹೊಡೆದಿದಾನೆ, ಅಂದ್ರೆ! ಥೂ! ನೀವು ನಶ್ಯಾನೂ ಹಾಕುವುದಿಲ್ಲ, ಬೀಡೀನೂ ಸೇದುವುದಿಲ್ಲ. ಆತನಿಗೆ ಎರಡೂ ಅಭ್ಯಾಸ ಉಂಟಂತೆ. ಅದಕ್ಕೇ ನೋಡಿ, ರಾಜರಾಜೇಶ್ವರಿಯದು ಸೊಗಸಾದ ಒಂದು ನಶ್ಯದ ಕ್ಯಾಲೆಂಡರ್ ತಂದಿದಾರೆ, ಕಣ್ಣಿಗೆ ಒತ್ತಿಕೊಳ್ಳ ಬೇಕು, ಅನ್ನಿಸುತ್ತಿದೆ ಬೀಡೀದೂ ಅಷ್ಟೆ....ತುಂಬಾ ಚೆನ್ನಾಗಿದೆ. ಕ್ಷೀರಸಾಗರ ದಲ್ಲಿ ಶ್ರೀಮನ್ನಾರಾಯಣ ಮಲಗಿರುವುದು ..." ಆಗ ನಾವು ಭುಜ ತಟ್ಟಿಕೊಂಡೇ ಮನೆಯಿಂದ ಹೊರಬೀಳುತ್ತೇವೆ. "ಅಂಥದ್ದೇ ಕ್ಯಾಲೆಂಡರುಗಳನ್ನ, ಪಕ್ಕದ ಮನೆ ಯವನ ಕಣ್ಣು ಕುಕ್ಕುವಷ್ಟು, ಸಂಜೆಯೊಳಗೆ ತಂದೇ ತರುತ್ತೇನೆ, ನೋಡುತ್ತಿರು! ಬಸ್ ಕಂಡಕ್ಟರಿಗಿಂತ ಕೀಳೇ ನಾನು?" ಎನ್ನುತ್ತ, ರಸ್ತೆಗಿಳಿದು, ಅಂಗಡಿ ಬೀದಿಗೆ ನುಸುಳಿ, ಬಾಲ ಆಡಿಸಿ, ಹಲ್ಲು ಕಿರಿಯುತ್ತಾನೆ, ಮಾರಾಯ. (2) ಆಗಲೇ ಹೇಳಿದಂತೆ, ಕ್ಯಾಲೆಂಡರುಗಳಲ್ಲಿ ದೇವದೇವಿಯರ ಚಿತ್ರ ಇರುವುದರಿಂದ, ಮನೆ

ಯಾಗೆಕೆ ಮೋಹ! ಆ ದೇವಿಯರ ಚಿತ್ರ, ಸಿನಿಮ ತಾರೆಯರದ್ದಾದ್ದರಿಂದ, ಮನೆ ಯಾತನಿಗೆ ಮೋಹ! ಆ ಚಿತ್ರದೆದುರು ಕೈ ಮುಗಿಯುತ್ತಾಳೆ, ಆಕೆ! ಕಣ್ಣು ಮಿಟುಕಿಸುತ್ತಾನೆ ಆತ.

(3) ಗೋಡೆ ಬಿರುಕುಗಳನ್ನು ಮುಚ್ಚಿ, ತಾವು ಸದ್ಗೃಹಸ್ಥರು ಎಂದು ತೋರಿಸಿಕೊಳ್ಳಬೇಕೆಂಬ ಹಂಬಲದಿಂದಲೂ, ಹಲವರು ಕ್ಯಾಲೆಂಡರ್ ಬೇಟೆಯಂತಹ ನಾಚಿಕೆಕೆಟ್ಟ ಕೆಲಸಕ್ಕೆ ಇಳಿಯುತ್ತಾರೆ. (4) ಇನ್ನು ಕೆಲವರಿದಾರೆ, ಅವರಿಗೆ ಯಾವುದು ಉಚಿತವಾಗಿ ಸಿಕ್ಕರೂ, ಅದು ಬೇಕೇಬೇಕು ಕಡಲೆಪುರಿಯೋ ಕಾಂಪ್ಲಿ ಮೆಂಟರಿ ಟಿಕೇಟೋ ಯಾವುದೇ ಇರಲಿ, ಕಿಸೆಗೆ ತುಂಬುತ್ತಾರೆ. ಅಂಥವರು ಅಂಗಡಿ ಗಳಿಗೆ ಹೋಗಿ, ಹಲ್ಕಿರಿದು, ಕ್ಯಾಲೆಂಡರ್ ಸಂಪಾದಿಸಿ, ತಮ್ಮ ಈ ಕೆಟ್ಟ ಚಾಳಿಯ ಚಿಹ್ನೆಗಳಾಗಿ ಅವನ್ನು ಗೋಡೆಗೆ ಸೇರಿಸಿ ಮೊಳೆ ಹೊಡೆಯುತ್ತಾರೆ.

ಕಡೆಯದಾಗಿ, ಒಂದು ಗುಂಪು! ಸಂದೇಹ ಪಿಶಾಚಿಗಳು. ಅವರಿಗೆ ತಮ್ಮ ಕೋಣೆಯಲ್ಲಿ ಒಂದು ಕ್ಯಾಲೆಂಡರಿದ್ದರೆ ಸಾಲದು! ದಿನ ತಾರೀಖು ಅತ ತಪ್ಪು ಹೊಡದಿದ್ದರೆ? ಇನ್ನೂ ನಾಲ್ಕಾರಿದ್ದರೆ, ಅವುಗಳಲ್ಲೆಲ್ಲ ಶುಕ್ರವಾರ ೨೮ ಅಂತ ಪ್ರಿಂಟ್‌ಮಾಡಿದ್ದರೆ, ಅವುಗಳನ್ನೆಲ್ಲ ಒಂದೊಂದಾಗಿ ಓದಿ ತಾಳೆಹಾಕಿ, ಆ ಮೇಲೆ, ಅವರು ನಿರ್ಧರಿಸುತ್ತಾರೆ. "ಓ! ಇವತ್ತು ಶುಕ್ರವಾರ, ೨೮ನೇ ತಾ||" ಎಂದು! ಇಂಥವರಿಗೆ ನಿಜಕ್ಕೂ, ಹತ್ತು ಹನ್ನೆರಡು ಕ್ಯಾಲೆಂಡರುಗಳು ಬೇಕೇ ಬೇಕು, ಪಾಪ.

—ನಾ. ಕ.



ನಮ್ಮ ಚೆಂಡಾಟವನ್ನೇ ಜನರು ನೋಡಿ, ಭರತನಾಟ್ಯ ಅಂತ ಅಡ್ತಾರಂತಲ್ಲೇ?

ಪ್ರಾಣೇಶ ಪ್ರಸಂಗ

ಅನ್ನ ಸತ್ಯಾಗ್ರಹ ಪ್ರಕರಣ

ಅನ್ನ ಸತ್ಯಾಗ್ರಹ ಎಂದಮಾತ್ರಕ್ಕೆ ಪ್ರಾಣೇಶನೇನಾದರೂ ಪ್ರಸಿದ್ಧಿಗೆ ಆ ದಾರಿ ಹಿಡಿದನೆ ಎಂದು ಶಂಕಿಸಬೇಕಾಗಿಲ್ಲ. ಏಕೆಂದರೆ ಆತ ಬಡಪೆಟ್ಟಿಗೆ ಮಾಮೂಲಿನ ಒಂದು ಲೋಟ ಕಾಫಿ ಕೂಡ ಬಿಟ್ಟಿರಲಾರದ ಆಸಾಮಿ. ಹಾರ ತುರಾಯಿ, ಹಣ್ಣಿನ ರಸ, ಮೆರವಣಿಗೆ—ಹೀಗೆ ಏನು ಆಸೆ ತೋರಿಸಿದರೂ ಮಾಮೂಲಿನ ಬಾಬತ್ತುಗಳೆಲ್ಲ ಯಥಾಪ್ರಕಾರ ದೊರೆತ ಮೇಲೆ ಉಳಿದದ್ದೆಲ್ಲ ದಕ್ಕಿದರೆ ದಕ್ಕಲಿ ಎನ್ನುವಾತ. ಅಂಥವನು ಯಾವ ಆಮಿಷಕ್ಕೋಸ್ಕರವಾಗಿಯಾದರೂ ಅನ್ನ ಬಿಟ್ಟು ಹಲ್ಲು ಕಚ್ಚಿ ಕೂಡುವವನಲ್ಲ ಎಂದು ಬೇರೆ ಹೇಳಬೇಕೆ? ಇಲ್ಲಿ ಅನ್ನ ಸತ್ಯಾಗ್ರಹ ಪ್ರಾಣೇಶ ಪ್ರಯೋಗಿಸಿದ್ದಲ್ಲ. ಬೇರೆಯವರು ಉಪಯೋಗಿಸಿದ ಆ ಅಸ್ತ್ರವನ್ನು ನಾವು ಎದುರಿಸಬೇಕಾಗಿ ಬಂದ ಪ್ರಕರಣವಿದು

ಅನ್ನ ಸತ್ಯಾಗ್ರಹವನ್ನು ಎದುರಿಸಲು ಈತ ಮಾಡಿದ ಮಹಾಪರಾಧವಾದರೂ ಏನು? ಸಂಬಳ ಸಾರಿಗೆ ಹೆಚ್ಚುಕೊಟ್ಟು ಅಥವಾ ಕಡಮೆ ಕೊಟ್ಟು ಕೆಲಸಗಾರರನ್ನು ಕೆರಳಿಸಿದನೆ? ಸಿನಿಮಾ ಭಕ್ತರಾದ ವಿದ್ಯಾರ್ಥಿಗಳ ಮೇಲೆ ವಿಶೇಷಕರ ಹೇರಬೇಕೆಂದು ಪ್ರತಿಪಾದಿಸಿದನೆ? ಹಾಗೊಂದೂ ಇಲ್ಲ. ಈತನ ಪೀಕಲಾಟದ ಮೂಲವೇ ಬೇರೆ.

ಕೃಶ್ಚೇವನ ಮೊದಲನೆ ಚಂದ್ರಮರಿ ಗಗನಕ್ಕೇರಿದ ಮುಹೂರ್ತ ಪ್ರಾಣೇಶನಿಗೂ ಬಹಳ ಸಂಭ್ರಮದ್ದಾಯಿತೆಂಬುದು ಗೊತ್ತಿಲ್ಲ. ಆದರೆ ಕೆಲವೇ ದಿನಗಳಲ್ಲಿ ಡಲ್ಲೇಸ್ ಮಹಾಶಯರ ಹೊಟ್ಟೆಗೆ ತಣ್ಣೀರು ಹುಯ್ಯೋದಕ್ಕೋ ಎಂಬಹಾಗೆ ರಷ್ಯಾದವರು ಶ್ವಾನ ಸುಸಜ್ಜಿತವಾದ ಇನ್ನೊಂದು ಗೋಳವನ್ನು ಹಾರಿಸಿದಾಗ ಮಾತ್ರ ಪ್ರಾಣೇಶ ಒಂದು ಅನಿರೀಕ್ಷಿತ ತೊಡಕಿನಲ್ಲಿ ಸಿಕ್ಕಿಕೊಂಡ.

ಮುಖ್ಯ ಅದು ಸ್ವಯಂಕೃತಾಪರಾಧ. ಇಲ್ಲದಿದ್ದರೆ ನವದುಂದುಭಿಯಲ್ಲಿ ಲೈಕಾ (ಈಗ ಕೀರ್ತಿಶೇಷ) ಚಿತ್ರವೊಂದನ್ನು ಅಚ್ಚು ಮಾಡಲೇಬೇಕೆಂಬ ಹಾಳು ಚಪಲ ಅವನಿಗೆ ಬರಬೇಕಿತ್ತೆ? ಅಲ್ಲಿ ಇಲ್ಲಿ ದೊಡ್ಡ ಪೇಪರಿನವರೊಡನೆ ವಿಚಾರಿಸಿದ ಆದರೆ ಬೇಗನೆ ಬ್ಲಾಕು ದೊರೆಯುವ ಲಕ್ಷಣ ಕಾಣಿಸಲಿಲ್ಲ. ಹೇಗಾದರೂ ಮಾಡಿ ಈ ವಾರ ಆ ಚಿತ್ರವನ್ನು ಅಚ್ಚಿನಲ್ಲಿ ಚಚ್ಚಿಯೇ ಬಿಡುತ್ತೇನೆಂದು ಕೊಚ್ಚಿಕೊಳ್ಳುತ್ತಿದ್ದವನು ತನ್ನ ಹಠವನ್ನು ಸಾಧಿಸಿಯೇಬಿಟ್ಟ. ಚಿತ್ರ ಬಂತು ಆ ವಾರ, ಅಮರವಾದ ಆ ಕುನ್ನಿಯ ಕೀರ್ತಿ ವರ್ಣನೆಗಳೊಡನೆ. "ಎಲ್ಲಿ ಸಿಕ್ಕಿತೋ ಬ್ಲಾಕು?" ಎಂದು

ಕೇಳಿದೆ. ಪ್ರಾಣಿ ಉತ್ತರಕೊಡದೆ ಯಾಕೋ ಮುಸು ಮುಸು ನಗತೊಡಗಿತು. ನನಗೆ ಯಾಕೋ ಅನುಮಾನವಾಯಿತು. ಚಿತ್ರವನ್ನು ಚೆನ್ನಾಗಿ ಪರೀಕ್ಷಿಸಿದೆ. "ಲೋ ನಮ್ಮ ಸೆಲ್ವಿ ಇದ್ದ ಹಾಗಿದೆಯಲ್ಲೋ" ಎಂದೆ. ಆತ ಮತ್ತೂ ಸದ್ದಿಲ್ಲದೆ ನಗತೊಡಗಿದನೇ ಹೊರತು ಬೇರೆ ಮಾತಿಲ್ಲ.

'ಸೆಲ್ವಿ' ನಮ್ಮ ಪಕ್ಕದ ಮನೆ ರಾಘವಯ್ಯನವರ ನಾಯಿ. ಒಂದೆರಡು ದಿನ ಗಳ ಹಿಂದೆ ಬಿಸ್ಕತ್ತಿನ ಆಸೆ ತೋರಿಸಿ ಪ್ರಾಣೇಶ ಹಿತ್ತಲಲ್ಲಿ ಆದರಿಂದ ಏನೇನೋ ಕಸರತ್ತು ಮಾಡಿಸುತ್ತಿದ್ದುದ್ದು ನೆನಪಾಯಿತು. ಆಗ ಆತನ ಕೈಯ್ಯಲ್ಲಿ ಕ್ಯಾಮರಾ ಬೇರೆ ಇತ್ತೆಂದು ಜ್ಞಾಪಕವಾದಾಗ ಎಲ್ಲವೂ ಅರ್ಥವಾಯಿತು. "ಅಯ್ಯೋ, ನಾಚಿಕೆ ಯಿಲ್ಲದೆ 'ಸೆಲ್ವಿ'ಯ ಚಿತ್ರವನ್ನು ಲೈಕಾ ಎಂದು ಹಾಕಿದೀಯ ?" ಎಂದು ಉಗಿದೆ.

ಪ್ರಾಣಿ ನಗುತ್ತಾ "ಇರಲಿ ಬಿಡಯ್ಯ. ಲೈಕಾ ಕೂಡ ನಮ್ಮ ಸೆಲ್ವಿಯ ಹಾಗೇ ಒಂದು ನಾಯಿ. ಗ್ರಹಯಾನ ಮಾಡೋದಕ್ಕೆಂದು ಲೈಕಾಗೇನೂ ತೋಡು ಮಾಡಿ ದ್ದಿರಲಾರದು. ಆದ್ದರಿಂದ ಯಾವುದಾದರೊಂದು ಸೊಗಸಾದ ಗ್ರಾಮಸಿಂಹದ ಚಿತ್ರ ಹಾಕಿದರೂ ಉದ್ದೇಶ ಸಿದ್ಧಿಸಿದ ಹಾಗೆಯೇ" ಎಂದು ತನ್ನನ್ನು ಸಮರ್ಥಿಸಿಕೊಂಡ. ಯಾರದೋ ಒಂದು ಚಿತ್ರಹಾಕಿ ಪಾಕಿಸ್ತಾನದ ಇಂತಿಷ್ಟನೇ ಪ್ರಧಾನಿ ಎಂದು ಒರೆದು ಪಾರಾಗಿದ್ದ ರುಸ್ತುಮ ಆತ. ಪಾಕಿಸ್ತಾನದ ಪ್ರೈಮ್ ಮಿನಿಸ್ಟರು ಯಾವ ಯಾವ ಕಾಲದಲ್ಲಿ ಯಾರು ಅಂತ ಯಾರಿಗೆ ಗೊತ್ತಿರುತ್ತೆ? ಆ ಕುರಿತು ಸಂಶೋಧನೆ ನಡೆಸಲು ಯಾರು ತಲೆಬಿಸಿಮಾಡಿಕೊಳ್ಳುತ್ತಾರೆ?

"ಅದೆಲ್ಲಾ ಸರಿ. ಆದರೆ ರಾಘವಯ್ಯ ಏನಾದರೂ ಇದನ್ನ ಕಂಡುಹಿಡಿದರೆ ಅಪ್ಪಣೆ ಇಲ್ಲದೆ 'ನನ್ನ ನಾಯಿ ಚಿತ್ರ ತೆಗದು ನವದುಂದುಭಿಯಲ್ಲಿ ಹಾಕಿದ್ದೇಕೆ?' ಎಂದು ಆಕ್ಷೇಪಿಸಿಯಾರು" ಎಂದೆ. ಏಕೆಂದರೆ ರಾಘವಯ್ಯನವರಿಗೆ ಮೊದಲೇ ಪ್ರಾಣೇಶನ ಮೇಲೆ ಅಸಮಾಧಾನವುಂಟು. ಅವರ ಅರವತ್ತರ ಶಾಂತಿಯಾದಾಗ ತಮ್ಮ ಫೋಟೋ ನವದುಂದುಭಿಯಲ್ಲಿ ಬರಬೇಕೆಂದು ಎಷ್ಟು ಒತ್ತಾಯಿಸಿದರೂ ಪ್ರಾಣೇಶ ಒಪ್ಪಿರಲಿಲ್ಲ. ಅಲ್ಲದೆ ಆತ ಮಹಾ ಜಗಳಗಂಟೆ. ಮುಂಗೋಪಿ. ಚಿಕ್ಕ ವಿಷಯಕ್ಕೆ ಕಾಲು ಕೆರೆದು ಜಗಳಮಾಡುವುದರಲ್ಲಿ ಸುಪ್ರಸಿದ್ಧರಾದ್ದರಿಂದ "ರೇಗು ವಯ್ಯ" ಎಂದು ಕರೆಸಿಕೊಳ್ಳುವ ಕೀರ್ತಿ ಅವರದು. ಆದರೆ ಪ್ರಾಣೇಶ "ಆತ ಮಾಡೋದು ಕಂಡಿದೀನಿ ಬಿಡೋ" ಎಂದ ಶುದ್ಧ ಹುಡುಗಾಡಿಕೆಯಲ್ಲ.

ಅಂತೂ ಲೈಕಾ ಉಪಗ್ರಹದೊಳಗೆ ಬಾಲ ಅಲ್ಲಾಡಿಸುತ್ತಾ ಸುಖವಾಗಿದೆ ಇನ್ನೇನು ಅದನ್ನ ಮೆತ್ತಗೆ ಭೂಮಿಗೆ ಇಳಿಸುತ್ತಾರೆ ಎಂದು ಮುಂತಾಗಿ ಸುದ್ದಿಗಳು ಬರುತ್ತಿರುವಷ್ಟು ಹೊತ್ತು ತೊಂದರೆಯಿರಲಿಲ್ಲ. ಆದರೆ ಇದ್ದಕ್ಕಿದ್ದ ಹಾಗೆ ಲೈಕಾ ಸತ್ತಿತು ಎಂಬ ಸುದ್ದಿಬಂದು ಪಾಶ್ಚಾತ್ಯ ರಾಷ್ಟ್ರಗಳ ಶ್ವಾನಪ್ರಿಯರು ಮೊಸಳೆ ಕಣ್ಣೀರು

ಸುರಿಸುತ್ತಾ ಮತ್ಸರದಿಂದ ಭಾರವಾಗಿದ್ದ ಹೃದಯಗಳನ್ನು ಹಗುರಮಾಡಿಕೊಳ್ಳುತ್ತಿರುವಂಥ ಕಾಲದಲ್ಲಿ 'ಸೆಲ್ವಿ'ಗೆ ಮೈ ಚೆನ್ನಾಗಿಲ್ಲ ಎಂಬ ಸುದ್ದಿ ಬಂತು. ಚಿತ್ರದ ವಿಷಯ ಆಗಲೇ ಎಲ್ಲರಿಗೂ ತಿಳಿದುಹೋಗಿತ್ತು. ರೇಗುವಯ್ಯ ರೇಗಿಯೇ ರೇಗಿದರು. ಆ ದರಿದ್ರನಾಯಿಯ (ಲೈಕಾದ) ಹೆಸರಿಟ್ಟು ನನ್ನ ನಾಯಿಯ ಚಿತ್ರಹಾಕಿ ಅದರ ದುರ್ಗತಿ ಇದಕ್ಕೂ ಬರೋಹಾಗೆ ಮಾಡಿದಿರಾ? ಎಂದು ಆರ್ಭಟಿಸತೊಡಗಿದರು. ಅವರ ವಾದ ಸರಣಿ, ತರ್ಕ ಸರಣಿ ಕೇಳಿ ನನ್ನ ತಲೆ ಗಿರ್ರೆಂದು ತಿರುಗತೊಡಗಿತು. ಸದ್ಯ ಪ್ರಾಣೇಶ ಇರಲಿಲ್ಲ. ಹೆಂಡತಿಗೆ ಸೀತವಾತಗಳ ಭಯ ಹುಟ್ಟಿಸಿ ಬರಲು ನರ್ಸಿಂಗ್ ಹೋಮಿಗೆ ಹೋಗಿದ್ದ. ಪಶುವೈದ್ಯರನ್ನು ಕರೆಸಿ ಸೆಲ್ವಿಗೆ ಸಾಧ್ಯವಾದಷ್ಟು ಚಿಕಿತ್ಸೆ ಮಾಡಿಸುವ ಹೊಣೆ ಹೊತ್ತುಕೊಂಡೆ. ಆದರೂ ರೇಗುವಯ್ಯನವರ ಸಿಟ್ಟು ತಣಿಯಲಿಲ್ಲ. ಅತ್ತ ಸೆಲ್ವಿ ಕೂಡ ಮಾರನೆ ದಿನ ಬೆಳಗ್ಗೆ ಲೈಕಾ ಲೋಕವನ್ನು ಸೇರಿತು. ಸರಿ ರೇಗುವಯ್ಯ ಕೆಂಡವಾಗಿಬಿಟ್ಟರು. ನಮ್ಮ ಮನೆ ಬಾಗಿಲಿಗೆ ಬಂದು ಜರೆದಾಡಿದರು. ಪ್ರಾಣೇಶ ಅವರನ್ನು ಮತ್ತೂ ರೇಗಿಸಿದ. ಆತ ಸಿಟ್ಟು ತಡೆಯಲಾರದೆ ಸೊಂಟಕ್ಕೆ ಶಾಲು ಬಿಗಿದು ಬಾಗಿಲಲ್ಲೇ ಕುಳಿತುಬಿಟ್ಟರು. "ನನ್ನ ನಾಯೀನ ಕೊಲ್ಲಿಸಿದಿರಿ, ಅದನ್ನ ಬದುಕಿಸಿಕೊಡೋ ತನಕ ಅನ್ನ ನೀರು ಮುಟ್ಟೋಲ್ಲ. ಇಲ್ಲಿಂದ ಕದಲೊಲ್ಲ" ಎಂದು ಹಠ ಹಿಡಿದುಬಿಟ್ಟರು.

ಜನ ಗುಂಪು ಸೇರತೊಡಗಿತು. ಕೆಲವರು ಅವರನ್ನು ಹೀಯಾಳಿಸಿದರು. ಕೆಲವರು ನಮ್ಮನ್ನು ಜರೆದರು. ಅವರ ನಾಯಿಗಾನ ವಿಷ ಹಾಕಿ ಕೊಂದರಂತೆ ಕಣೋ ಎಂಬಲ್ಲಿಯವರೆಗೂ ಬಂತು. "ಯಾಕೆ ಬೇಕಿತ್ತಪ್ಪ ಅಧ್ವಾನ?" ಎಂದು ಪ್ರಾಣೇಶನನ್ನ ಧರಾಟಗೆ ತೆಗೆದುಕೊಂಡೆ. ಆದರೆ ಆತ "ಸುಮ್ಮನೆ ಉಪವಾಸ ಬಿದ್ದಿರಲಿ, ಒಂದು ದಿನ. ಬೊಜ್ಜು ಕರಗುತ್ತೆ–" ಎಂದು ಆರ್ಭಟಿಸಿ ಒಳಗೆ ಹೋಗಿ ಯಾವುದೋ ಪುಸ್ತಕ ಹಿಡಿದು ಕುಳಿತುಕೊಂಡ. ಆತ ಹಾಗಂದನೆಂದು ನಾನು ಸುಮ್ಮನಿರೋಹಾಗಿದೆಯೇ? ಹೊರಗೆ ಬಂದು "ಪ್ರಾಣೇಶ ಕ್ಷಮಾಪಣೆ ಕೇಳಿದ" ಎಂದು ರೇಗುವಯ್ಯನವರ ಕಿವಿಯಲ್ಲಿ ಉಸುರಿಸಿದೆ. ಅವರು ಮತ್ತೂ ರೇಗುತ್ತಲೇ ಇದ್ದರು. "ನನ್ನ ನಾಯಿಗಾನ ಬದುಕಿಸಿ" ಎಂಬುದೇ ಅವರ ತಾರಕ ಮಂತ್ರ. ತಲೆ ಹಿಡಿದು ಕುಕ್ಕಿಬಿಡಲೇ ಅನ್ನಿಸಿತು. ಆದರೂ ತಾಳಿಕೊಂಡೆ. "ಸ್ವಾಮಿ ಆಗೋದು ಆಗಿಹೋಯಿತು. ಸೆಲ್ವಿಗೆ ಅಮೃತ ಶಿಲೆಯ ಸ್ಮಾರಕ ಕಟ್ಟಿಸುತ್ತೇವೆ ಎಂದು ಪ್ರಾಯಶ್ಚಿತ್ತ ಹೇಳಿಕೊಂಡೆ. ಆದರೂ ಅವರು ಜಗ್ಗಲಿಲ್ಲ ಘಮಘಮಿಸುವ—ರೇಗುವಯ್ಯನವರಿಗೆ ಅತ್ಯಂತ ಪ್ರಿಯ ವಸ್ತುವಾದ—ಗಟ್ಟಿ ಕಾಫಿ ಒಂದೂವರೆ ಪಾವು ತರಿಸಿ ಮುಂದಿಟ್ಟು ತಮ್ಮ ಅರ್ಧ ಗಂಟೆಯ ಅನ್ನ ಸತ್ಯಾಗ್ರಹ ಮುರಿಯಬೇಕೆಂದು ಬೇಡಿಕೊಂಡೆ. ನವದುಂದುಭಿಯಲ್ಲಿ ಕ್ಷಮಾಪಣೆ ಕೇಳುತ್ತೇವೆ ಎಂದು ಕೂಡ ಕೇಳಿಬಿಟ್ಟೆ. ಕಾಫಿಯ ಮಹಿಮೆಯೋ ದೇವರ ದಯೆಯೋ ಅಂತೂ ರೇಗುವಯ್ಯ ಕೊಂಚ ಶಾಂತರಾಗಿ ಕಾಫಿಯ ಕಡೆಗೆ ಕೈನೀಡುತ್ತ "ನನ್ನ ಫೋಟೋ ಕೂಡ ಅಚ್ಚುಮಾಡಿ

ಇಂಥವರಿಗೆ ಮಹಾಪರಾಧ ಮಾಡಿದ್ದೇವೆ" ಎಂದು ಬರೆಸಲು ಸಿದ್ಧರಿದ್ದೀರಾ?" ಎಂದು ಸವಾಲು ಹಾಕಿದರು. ನನ್ನ ಆನಂದಕ್ಕೆ ಪಾರವಿಲ್ಲ. ಎದೆ ತಟ್ಟಿ "ಸಿದ್ಧ ನಾನು" ಎಂದೆ. ಇಗೋ ನಿನ್ನ ಆಶ್ವಾಸನೆಯ ಮೇರೆಗೆ ನನ್ನ ಸತ್ಯಾಗ್ರಹ ಮುರಿದಿದ್ದೇನೆ, ತಪ್ಪಿದರೆ ಜೋಕೆ" ಎಂದು ರೇಗುವಯ್ಯ ಕಾಫಿಯನ್ನು ಹೀರತೊಡಗಿದರು. ನಾನು ಓಡಿಹೋಗಿ ಕ್ಯಾಮರಾ ತಂದು ಅವರ ಆ ಭಂಗಿಯಲ್ಲೇ ಒಂದೆರಡು ಚಿತ್ರ ತೆಗೆದೆ. ಪರಿಸ್ಥಿತಿಗೆ ಕಳೆಕಟ್ಟಲೆಂದೋ ಏನೋ ರೇಗುವಯ್ಯ ನಾನು ಕ್ಲಿಕ್ ಎನಿಸುತ್ತಿದ್ದಂತೆ ಮೂತಿಯಲ್ಲಿ ಕೊಂಚ ದುಃಖ ಪ್ರದರ್ಶಿಸಿದರು. ಅಂತೂ ವಿಪತ್ತು ತೊಲಗಿತು. ರೇಗುವಯ್ಯನ ಆಗ್ರಹವನ್ನನುಭವಿಸಿದ ನಾನು ಅದನ್ನೆಲ್ಲ ಪ್ರಾಣೇಶನ ಮೇಲೆ ತೀರಿಸಿಕೊಂಡೆ. ಫೋಟೋ ಹಾಕಲಾರೆ ನವದುಂದುಭಿಯಲ್ಲಿ ಎಂದು ಆತ ಖಡಾಖಂಡಿತವಾಗಿ ಹೇಳಿದಾಗ ನಾನೇ ಅನ್ನ ಸತ್ಯಾಗ್ರಹ ಮಾಡುತ್ತೇನೆಂದು ಬೆದರಿಸಿದೆ ಕೊನೆಗಂತೂ ಆತ ಒಪ್ಪಿದ.

ಆ ವಾರದ ನವದುಂದುಭಿಯಲ್ಲಿ ಅಳುಮೋರೆಯ ರೇಗುವಯ್ಯನ ಚಿತ್ರವೇನೋ ಬಂತು. ಆದರೆ ಅದರ ಕೆಳಗೆ ನಾನು ಬರೆದುಕೊಟ್ಟ ಟಿಪ್ಪಣಿಯಿರಲಿಲ್ಲ. ಆದರ ಬದಲಿಗೆ—

ಶ್ರೀ—ಇಂಥವರು ......ಸ್ಪುಟ್ನಿಕ್‌ನಲ್ಲಿ ಲೈಕಾವನ್ನು ತುರುಕಿ ಕೊಂದುದರ ನಿಷೇದಾರ್ಥವಾಗಿ ಒಂದು ದಿನ ಅನ್ನ ಸತ್ಯಾಗ್ರಹ ಹೂಡಿದ ಸ್ಥಳೀಯ ಮಹನೀಯರು" ಎಂದು ಬರೆದಿತ್ತು.

ಅದನ್ನು ಕಂಡ ನನಗೆ ಎದೆ ಧಸಲ್ಲೆಂದಿತು. ರೇಗುವಯ್ಯ ಮತ್ತೆ ರೇಗಿ ಸತ್ಯಾಗ್ರಹ ತೊಡಗಿದರೂ ತೊಡಗಿದರೆ, ಮಾನ ನಷ್ಟಕ್ಕೆ ಕೋರ್ಟಿಗೆ ಹೋದರೂ ಹೋದರೆ ಎಂದು ನಡುಕ ಹುಟ್ಟಿತು. ಈ ಪೋಲಿಗಳ ಸಹವಾಸ ತ್ಯಜಿಸಿ ಊರುಬಿಟ್ಟು ಓಡುವುದೇ ವಾಸಿ ಎಂದುಕೊಳ್ಳುತ್ತಿರುವಷ್ಟರಲ್ಲಿ ರೇಗುವಯ್ಯನವರೇ ನವದುಂದುಭಿ ಪ್ರತಿ ಹಿಡಿದು ಬಂದರು. ಅವರ ಹಸನ್ಮುಖ ಕಂಡು ನನಗೆ ಜೀವ ಬಂತು. "ಕೆಳಗಡೆ ಏನೇನೋ ಬರೆಸಿದೀರ—ಚಿಂತೆಯಿಲ್ಲ. ಆದರೂ ಚಿತ್ರ ಚೆನ್ನಾಗಿ ಬಂದಿದೆ" ಎಂದು ಆತ ತುಂಬ ಸಮಾಧಾನದಿಂದ ಮೆಚ್ಚುಗೆ ಸೂಸಿದಾಗ "ಭಗವಂತನ ಲೀಲೆ" ಎಂಬ ಎರಡು ಶಬ್ದ ನನ್ನ ಬಾಯಿಯಿಂದ ಬಂತು. ಯಾಕೆ ಏನು ಎಂದು ಕೇಳದೆ ರೇಗುವಯ್ಯ ಕೂಡ ಗಹಗಹಿಸಿ ನಕ್ಕರು.

—ರಾಮಿ.

——o——

ಮುಗಿಲುಹಳ್ಳಿಯಲ್ಲಿ ಸರ್ವೋದಯ

ಮುಗಿಲುಹಳ್ಳಿ ದಾನಿಗಳ ತವರುಮನೆ. ಅಲ್ಲಿಗೆ ಬಂದವರಾರೂ ಬರಿ ಕೈಯಲ್ಲಿ ಹೋಗಿಲ್ಲ. ಸುಮಾರು ಆರು ತಿಂಗಳ ಕೆಳಗೆ ಆಗಂತುಕನೊಬ್ಬ ಮುಗಿಲುಹಳ್ಳಿಗೆ ಬಂದ. ಉಲ್ಲೂಕೇಶ್ವರ ದೇವಸ್ಥಾನದಲ್ಲಿ ಉಪವಾಸ ಕುಳಿತ. ಯಾಕಲೇ ಅನ್ಯಾಯವಾಗಿ ಉಪಾಸ ಒಣಗ್ತೀ ಎಂದು ಭಕ್ತಾದಿಗಳು ಕೇಳಿದರು. ತನಗೆ 7864 ರೂ. 25 ನ.ಪೈ. ಕೊಡುವವರೆಗೆ ತಾನು ಉಪವಾಸ ವ್ರತ ಹೂಡುವುದಾಗಿ ತಿಳಿಸಿದ. ತನಗೇಕೆ ಹಣ ಬೇಕೆಂದು ಅವನು ವಿವರಣೆ ಕೊಡಲಿಲ್ಲ. ನಾಲ್ಕಾರು ದಿನದಲ್ಲೇ ಭಕ್ತಾದಿಗಳು ನೂರಿನ್ನೂರು ರೂ ಚಂದಾ ಕೂಡಿಸಿ ಅವನಿಗೆ ನಿಧಿ ಸಮರ್ಪಣೆ ಮಾಡಲು ಹೋದರು. ತನಗೆ 7864 ರೂ 25 ನ.ಪೈ. ಬೇಕೇ ಬೇಕು, ಒಂದು ಕಾಸು ಕಡಮೆಯಾದರೂ ಬೇಡ ಎಂದ ಆ ಆಗಂತುಕ. 'ಇದೆಲ್ಲೇ ಶನಿ ಗಂಟು ಬಿತ್ತೋ' ಎಂದುಕೊಂಡರು ಜನ. 'ಲೇ ತಮ್ಮ, ಅತ್ಲಾಗೆ ಒಂದು ಐನೂರು ರೂಪಾಯಿ ಕೊಡ್ತೀವಿ. ಏನು ತಗಂಡು ಹೋಗ್ತೀಯೋ, ಇಲ್ಲ ಚರ್ಮ ಹರ್ದು ಕೈಗೆ ಕೊಡನೋ ಹೇಳ್ಬಿಡು' ಎಂದರು. ಅವನು ಐನೂರು ತೆಗೆದುಕೊಂಡು ಕಾಲ್ಕಿತ್ತ.

ಅಂದಮೇಲೆ ವಿನೋಬಾ ಬಂದಾಗ ಹಿಂದೆ ಬೀಳುವರೇ? ಮುಗಿಲುಹಳ್ಳಿ ಸರ್ವೋದಯ ತತ್ವಕ್ಕೆ ಮಾರುಹೋಗಿದೆ. ಕೆಲವು ಮಾರ್ಪಾಡುಗಳೊಡನೆ ನಮ್ಮೂರಿನಲ್ಲಿ ಸರ್ವೋದಯ ಭರ್ಜರಿ ಆಚರಣೆಗೆ ಬಂದಿದೆ.

ವಿನೋಬಾ ಬಂದಾಗ ಅವರನ್ನು ಸ್ವಾಗತಿಸಲು ಏನಿಲ್ಲ ಅಂದರೆ ಒಂದು ಇಪ್ಪತ್ತುಸಾವಿರ ಜನ ಊರಿನ ಹೊರಗೆ ನೆರೆದಿತ್ತು. ಪೋಲೀಸರ ಲಾಠಿ ಛಾರ್ಜಿಗೂ ಜನ ದಾದುಮಾಡಲಿಲ್ಲ ಶಿಸ್ತಿನಿಂದಿರಬೇಕು ಎಂದು ನಮ್ಮೂರಿನ ಸ್ವಾಗತ ಸಮಿತಿ ಮೈಕಿನಲ್ಲಿ ಬೇಡಿಕೊಂಡಿತು. 'ಹೋಗೋ ನಿನ್ನ ಎಲ್ಲೆ ಶಿಸ್ತು, ಬಂದ್ಬಿ, ಆತು. ನೀನ್ಯಾವನೋ ಹೇಳಕ್ಕೆ' ಎಂದು ಜನ ಪ್ರತಿಭಟಿಸಿತು. ಮಂಡಕ್ಕಿ, ಖಾರ ತಿನ್ನುತ್ತಾ ಕಾದೇ ಕಾದರು. ಕೊನೆಗೊಮ್ಮೆ ವಿನೋಬಾ ಬಂದೇ ಬಿಟ್ಟರು. ಜನ 'ವಿನೋಬಾಕಿ ಜೈ' ಎಂದು ಒಕ್ಕೊರಲಿನಿಂದ ತಾರಕದಲ್ಲಿ ಕೂಗಿದರು. ಆ ಕೂಗಿಗೆ ವಿನೋಬಾ ಕಿವಿ ತೂತು ಬೀಳಬೇಕಿತ್ತು. ಆದರವರು ಜ್ಞಾನಿಗಳು. ಈ ಕೂಗನ್ನು ತಮ್ಮ ದಿವ್ಯ ದೃಷ್ಟಿಯಿಂದ ಮೊದಲೇ ಕಂಡುಕೊಂಡು ಕಿವಿ ಸುತ್ತಾ ನೀಲೀ ಶಾಲು ಸುತ್ತಿದ್ದರು. 'ಜೈಜಗತ್' ಎಂದು ಕೆಲವರು ಕೂಗಿದರು. ಆದರೆ ಬಹುಸಂಖ್ಯಾತರು 'ಜೈವಿನೋಬಾ' ಎಂದರು. ವಿನೋಬಾ ತಮ್ಮ ಜಯಕಾರ ಮಾಡಬಾರದೆಂದು ಬೇಡಿದರು. ಆದರೆ ಮುಗಿಲುಹಳ್ಳಿ ಅದನ್ನು ಒಪ್ಪಲಿಲ್ಲ. ಡಲೆಸ್, ಮಲಿನೊವ್‌ಸ್ಕಿ, ಇ. ವಿ. ಆರ್., ಹೆರಾಲ್ಡ್ ಮೊದಲಾದವರಿರುವ ವಿಶ್ವಕ್ಕೆ ಜಯವಾಗುವುದು ಅವರಿಗಿಷ್ಟವಿಲ್ಲ.

ವಿನೋಬಾರವರು ಬರುವುದಕ್ಕೆ ಎಷ್ಟೋ ದಿನಗಳ ಹಿಂದಿನಿಂದಲೇ ಊರಿನಲ್ಲಿ, ಸುತ್ತಮುತ್ತಲು ಹಳ್ಳಿಗಳಲ್ಲಿ ಸಿದ್ಧತೆಗಳು ನಡೆದಿದ್ದವು. ಎಲ್ಲಾ ರಾಜಕೀಯ ಪಕ್ಷಗಳೂ, ಎಂಎಲ್‌ಎಗಳೂ, ಮಾಜೀ ಹಾಲೀ ಮಂತ್ರಿಗಳೂ, ದಾನ ಚಳುವಳಿಯ ಪ್ರಚಾರಮಾಡಿದರು.

ಅವರೆಲ್ಲಾ ಕಂಡವರ ಕಾರುಗಳಲ್ಲಿ ಹಳ್ಳಿ, ಹಳ್ಳಿ ತಿರುಗಿ, ಗೌಡ, ಶಾನುಭೋಗ ರನ್ನು ಬಡಿದೆಬ್ಬಿಸಿ, ಲೋಕಲ್ ರಾಜಕಾರಣ ಪಟುಗಳನ್ನು ಹುರಿದುಂಬಿಸಿ, ಜನರನ್ನು ಬೆದರಿಸಿ, 'ವಿನೋಬಾ ಬರುತ್ತಾರೆ. ಮುಂದಿನ ಎಲೆಕ್ಷನ್ನಲ್ಲಿ ನಮಗೇ ನಿಮ್ಮ ಓಟು. ಆದರೂ ಸದ್ಯದಲ್ಲಿ ಏನಾದರೂ ಮಾಡಲೇಬೇಕು. ಪಾಪ! ಬಡಪಾಯಿ ವಿನೋಬಾ ಅಷ್ಟು ದೂರದಿಂದ ಬರುತ್ತಿದಾರೆ. ಅವರಿಗೆ ಏನಾದರೂ ಕೊಡಲೇ ಬೇಕು. ಇಲ್ಲದಿದ್ದರೆ ಅವರು ಶಾಪ ಕೊಟ್ಟುಬಿಡುತ್ತಾರೆ. ಅವರು ತಪಸ್ವಿಗಳು, ಜ್ಞಾನಿಗಳು. ಏನಾದರೂ ಕೊಟ್ಟುಬಿಡಿ ಸದ್ಯಕ್ಕೆ ಅವರಿಗೆ. ಆದರೆ ಮುಂದಿನ ಎಲೆಕ್ಷನ್ನಿನಲ್ಲಿ ನಮ್ಮ ಪಾಲೇ ಆಗಬೇಕು — ನೀವು ಪೋಲು ಮಾಡುವ ಓಟು' ಎಂದು ಮುಂತಾಗಿ ಹೇಳಿದರು.

ನಮ್ಮೂರಿನ ಮಾಜೀ ಅಧ್ಯಕ್ಷ ಹಾಗೂ ಪ್ರಚಂಡ ರಾಜಕಾರಣಿ ಬಿಂಕದ ಸಂಕಣ್ಣನವರು, ರಾಸಭೇಶ್ವರ ದೇವಸ್ಥಾನದ ಆವರಣದಲ್ಲಿ ರಾಸಭ ಭಕ್ತರ ಪ್ರಚಂಡ ಬಹಿರಂಗ ಸಭೆಯನ್ನು ಕರೆದು—'ಭೂದಾನ, ಸಂಪತ್ತಿದಾನ, ಶ್ರಮದಾನ, ಸಾಧನ ದಾನ, ಕಾಫಿದಾನ, ವಾಗ್ದಾನ, ಗೋದಾನ, ಪ್ರಾಣದಾನ, ಓಟುದಾನ, ನಿಧಾನ, ಮೈದಾನ ಇತ್ಯಾದಿ ಎಂಬತ್ತೆಂಟು ದಾನಗಳನ್ನು ಮಾಡುವುದೇ ಪರಮ ಕರ್ತವ್ಯ. ವೇದಗಳು, ಪುರಾಣಗಳು, ಬೈಬಲ್, ಕೊರಾನ್, ಶರಣರು, ಗಾಂಧಿ, ಮಾರ್ಕ್ಸ್, ಮೊರಾಕ್ಕೊ ಮೊದಲಾದುವೆಲ್ಲಾ ಹೇಳುವುದು ಅದನ್ನೇ' ಎಂದರು. ಜನಗಳೆಲ್ಲಾ 'ಅಷ್ಟೇ ಸೈ. ಅದ್ರಕಾಲಾಗೆ ಏನಾಗ್ತತೆ ನೋಡ್ಬಿಡನ' ಎಂದು ತಮ್ಮ ಬೆಂಬಲ ಸೂಚಿಸಿದರು.

ಆದರೆ, ರಾಸಭ Proposes but ಉಲ್ಲೂಕ disposes

ರಾಜಕಾರಣಿ ಭಂಗಿ ಬಸಣ್ಣನವರು ಗುಪ್ತ ಸಭೆಯೊಂದನ್ನು ಕರೆದರು. ವಿನೋಬಾ ಭಾವೆಯವರಿಗೆ ಆ ಕತ್ತೆಗಳು ಸಹಾಯಮಾಡುವರಂತೆ — ಮಾಡಲಿ ಉಲ್ಲೂಕೇಶ್ವರ ಭಕ್ತರೆಲ್ಲಾ ಶಾಂತಿಯುತ ಅಸಹಕಾರ ತೋರಿಸೋಣ. ಸಂಕಣ್ಣನ ಮರ್ಯಾದೆ ಪೂರ ಹೋಗಲಿ. ನಂತರ ನಾವು ಸರ್ವೋದಯದಲ್ಲಿ ಭಾಗವಹಿಸುವಾ! ಎಂದು ಬೋಧಿಸಿದರು.

ವಿದ್ಯಾರ್ಥಿ ವೃಂದದ ಸಭೆ ನೆರೆದು, ಸರ್ವೋದಯಕ್ಕೆ ಅಣಿಯಾಗಲು ನಿರ್ಧರಿಸಿತು ಎಲ್ಲ ವಿದ್ಯಾರ್ಥಿಗಳೂ ತಮ್ಮ ತಾಯ್ತಂದೆಗಳಿಗೆ ಈ ರೀತಿ ಕಾಗದ ಬರೆಯ ಬೇಕೆಂದು ಸಭೆ ತೀರ್ಮಾನಿಸಿತು.

ತೀರ್ಥರೂಪರಿಗೆ ನಮಸ್ಕಾರಗಳು,

ತರುವಾಯ, ವಿನೋಬಾ ಬರಲಿದ್ದಾರೆ. ಅವರಿಗೆ ಸಂಪತ್ತಿದಾನ ಕೊಡದಿದ್ದರೆ ಅಟೆಂಡೆನ್ಸ್ ಮತ್ತು ಕ್ಲಾಸ್ ಮಾರ್ಕ್ಸ್ ಕೊಡುವುದಿಲ್ಲವೆಂದು ಮೇಷ್ಟರು ಹೇಳುತ್ತಿದ್ದಾರೆ. ಹೆಚ್ಚಿಗೆ ಬರೆಯಲು ಸಮಯವಿಲ್ಲ. ಇನ್ನೇನು ಸರ್ವೋದಯವಾಗಲಿದೆ. ಆದ್ದರಿಂದ ಕೂಡಲೇ ಐವತ್ತು ರೂ. ತಪ್ಪದೆ ಕಳಿಸಿರಿ.

ಇಂತು, ತಮ್ಮ ಪ್ರೀತಿಯ ಪುತ್ರ/ಪುತ್ರಿ.

ವಿನೋಬಾ ಬರುವ ಪ್ರಯುಕ್ತ ಮಾರ್ಕೆಟ್ ರೇಟ್ ಎಲ್ಲ ವಸ್ತುಗಳಿಗೂ ಎರಡೆರಡಾಣೆ ಹೆಚ್ಚಿತು. ಸಂಪತ್ತಿದಾನ ಏನು ಕೈಯಿಂದ ಕೊಡಬೇಕೇ?

ಬಡ ನೌಕರರೊಬ್ಬರು, ತಮ್ಮ ಮಗಳ ಮದುವೆಗೋಸುಗ 500 ರೂ. ತಮಗೆ ಕೊಡಬೇಕೆಂದು ವಿನೋಬಾರವರನ್ನು ಪ್ರಾರ್ಥಿಸಿ, ಅರ್ಜಿ ಬರೆದು, ವಿನೋಬಾ ಬರುವುದನ್ನೇ ಕಾಯುತ್ತಿದ್ದರು.

ಮೊದಲೇ ಹೇಳಿದಹಾಗೆ ವಿನೋಬಾ ಬಂದೇಬಿಟ್ಟರು. ತುಂಬಿದ ಸಭೆಯಲ್ಲಿ ಕಾರ್ಯಕ್ರಮ ಆರಂಭವಾಯ್ತು. ಪ್ರಪ್ರಥಮವಾಗಿ. ಗಾನಗಾರ್ಧಪ, ಭಸ್ತ್ರಾಂಗೂಲಾರಿಷ್ಠ, ಕಾವ್ಯಪಂಕಮಹಿಷ, ಶ್ರೀ ಉದ್ಧಮೂತೆಪ್ಪನವರು ಸ್ವಾಗತ ಪದ್ಯವನ್ನೋದಿದರು. ಈಗ್ಯೆ ಎರಡು ತಿಂಗಳ ಕೆಳಗೆ ನಮ್ಮೂರಿನ ಅಮಲ್ದಾರರಿಗೆ ವರ್ಗವಾದಾಗ, ಅವರಿಗೆ ಕೊಟ್ಟ ಬೀಳ್ಕೊಡಿಗೆಯ ಸಮಾರಂಭದಲ್ಲಿ ಅವರಿಗೆ ಅರ್ಪಿಸಿದ ಪದ್ಯ ಮಾಲಿಕೆಯನ್ನೇ ಸೂಕ್ತ ಬದಲಾವಣೆಮಾಡಿ ಓದಿದರು. ಭಾಮಿನೀ ಷಟ್ಪದಿಯಲ್ಲಿದ್ದ ಆ ಕೃತಿರತ್ನದ ಒಂದು ಪದ್ಯವನ್ನು ಕೆಳಗೆ ಕೊಟ್ಟಿದೆ—

ಜಯತು ಜಯವೈ ರಾಗಿ ಜೋಳಕೆ
ಜಯತು ಜಯ ಅನ್ನ ಬೆಳೆವ ರೈತರ್ಗೆ
ಜಯವು ರಾಗೀ ಜೋಳ ಬೆಳೆಯುವ ಹೊಲಕೆ ಜಯತೈಯ
ಜಯವು ಜಯ ಅದ ದಾನಮಾಡುವ
ಜೈತು ಜೈ ಶ್ರೀ ವೀನೋಭಾವೆಗೆ
ಗಾಂಧಿಪುತ್ರಗೆ ಲೋಕ ವಿಭೃತಿಗೆ ಸ್ವಾಗತವ ಬಯಸುವೆವೂ
ಜಯ ಈ ಮುಗಿಲುಹಳ್ಳಿ ಜನರ್

ಸ್ವಾಗತ ಪದ್ಯದ ವಿನಾ ಸಭೆಯಲ್ಲಿ ಇನ್ನಾವ ಅನಾಹುತವೂ ಸಂಭವಿಸಲಿಲ್ಲ.

ಮುಗಿಲುಹಳ್ಳಿ ಸಂಪತ್ತಿದಾನಕ್ಕೆಂದು ಮೀಸಲಾಗಿತ್ತಷ್ಟೆ. ಆದುದರಿಂದ ದಾನಿಗಳೆಲ್ಲಾ ಒಂದು ಮದ್ದೆಯನ್ನೆತ್ತಿದರು. ದಾನ ಕೊಟ್ಟ ಹಣಕ್ಕೆ ಇನ್ಕಂಟ್ಯಾಕ್ಸ್, ಸೇಲ್ಸ್‌ಟ್ಯಾಕ್ಸ್, ಎಸ್ಟೇಟ್‌ಡ್ಯೂಟಿ, ವೆಲ್ತ್‌ಟ್ಯಾಕ್ಸ್, ಎಕ್ಸ್‌ಪೆಂಡಿಚರ್ ಟ್ಯಾಕ್ಸ್‌ಗಳು

ಬೀಳುವುವೇ ? ವಿನೋಬಾ, ನಿಜವಾಗಿಯೂ ಅಂಥಾ ಮಹಾತ್ಮರಾಗಿದ್ದರೆ, ಅವತಾರ ಪುರುಷರಾಗಿದ್ದರೆ, ಈ ಟ್ಯಾಕ್ಸ್‌ಗಳನ್ನೆಲ್ಲಾ ಏಕೆ ಸುಟ್ಟುಬಿಡಬಾರದು ಎಂಬ ಸಂಶಯವೂ ಜನರಿಗೆ ಬಂತು.

ಅದೇನೇ ಇರಲಿ ಒಂದು ಲಕ್ಷ ರೂಪಾಯಿ ಸಂಪತ್ತಿದಾನ ಮಾಡಿಬಿಡಬೇಕೆಂದು ನಿರ್ಧರಿಸಿದರು. ಆದರೆ ಒಂದೇ ಬಾರಿಗೆ ಕೊಟ್ಟರೆ ಸಂಪತ್ತಿದಾನ ನಡೆಯದು; ವಾರ್ಷಿಕವಾಗಿ, ಜೀವಮಾನ ಪರ್ಯಂತ ಅದು ಸಾಗುತ್ತಲೇ ಇರಬೇಕು ಎಂದು ತಿಳಿದಾಗ ಕರ್ಬಸ್ಯ, ವೀರ್ಬಸ್ಯ ಕೊಟರ್ಬಸ್ಯ, ಶಿದ್ದ, ಮಲ್ಲ, ಕಲ್ಲ, ಕೊಟ್ರ, ವೀರ್ಭದ್ರ, ಮಾಧೇವ, ತಿಮ್ಮ, ಬೊಮ್ಮ ಮೊದಲಾದವರೆಲ್ಲ—

'ಎಲ್ಲೆ ಹಚ್ಚಿ ತಗ್ಯೋ, ಯಾವನು ವರ್ಸ ವರ್ಸ ಲೊಟ್ಟನು? ಒಂದ್ಸರ್ತಿ ಇಸ್ಗಬೇಕು, ಅತ್ಲಗ್ಹೋಗ್ಬುಕು, ಅದ್ಬಿಟ್ಟೊ....' ಎಂದು ಹಿಂತಿರುಗಿ ಹೋಗಿಬಿಟ್ಟರು.

ವಿನೋಬಾರವರ ಭಾಷಣಗಳನ್ನು ಮಂತ್ರಮುಗ್ಧರಾಗಿ ಆಲಿಸಿ ಕೋಲೆ ಬಸವಗಳಂತೆ ತಲೆಹಾಕಿದರು. ಆದರೆ ಮನೆಗೆ ಹೋಗುತ್ತಾ 'ಅದೆಲ್ಲಾ ಸರಿ ಕಣೋ; ಅದ್ರೆ ನಮ್ಗಲ್ಲಪ್ಪ, ಗಾಂಧಿ ಗೀಂಧಿ ಅಂಥರಿಗೇ ಸರಿ' ಎಂದು ಮಾತಾಡಿಕೊಂಡರು. ವಿನೋಬಾ ಭಾಷಣವನ್ನು ಕೇಳಿದವರ ಪೈಕಿ ಮುಗಿಲುಹಳ್ಳಿಯ ತರುಣ ಎಂ.ಎಲ್.ಎ. ಶ್ರೀ ರಾಯರೂ ಇದ್ದರು. ಅವರು ಚುನಾಯಿತರಾದ ಕತೆ ನಿಮಗೆ ಗೊತ್ತು. ಚುನಾವಣೆಯಲ್ಲಿ ರಾಯರಿಗೆ ಕುಮಾರಿ ಸುಚಿತ್ರಾ ಸಹಾಯಮಾಡಿದ ಕತೆಯೂ ನಿಮಗೆ ಗೊತ್ತು.

ಸರ್ವೋದಯದಿಂದ ಸ್ಫೂರ್ತಿಗೊಂಡ ಶ್ರೀ ರಾಯರು ನೇರವಾಗಿ ಕುಮಾರಿ ಸುಚಿತ್ರಾ ಬಳಿಗೆ ಹೋಗಿ, ಪ್ರತಿದಿನ ತಮಗೇ exolusive ಆಗಿ ಒಂದು ಗಂಟೆ ಸಮಯದಾನಮಾಡುವಂತೆ ಕೇಳಿದರು. ೧೯೫೮ನೇ ಜನವರಿ ಒಂದನೇ ತಾರೀಖು ರಾಯರು, ಸುಚಿತ್ರಾ ಬಳಿ ಪ್ರೇಮದಾನ ಕೇಳಲಿರುವರೆಂದು ಖಚಿತವಾಗಿ ತಿಳಿದು ಬಂದಿದೆ.

ಶಿಕ್ಷಣ ರಂಗದಲ್ಲೂ ಸರ್ವೋದಯ ತನ್ನ ಪ್ರಭಾವ ಬೀರಿದೆ. ವಿನೋಬಾ ಬಂದ ದಿವಸ ಗಬ್ಬೂರಿನ ಶಾಲಾಮಾಸ್ತರರು ಲೋಕಲ್ ಹಾಲಿಡೇ ಡಿಕ್ಲೇರ್‌ಮಾಡಿ ಮುಗಿಲುಹಳ್ಳಿಗೆ ಬಿಜಯಂಗೈಸಿ, ಥಿಯೇಟರ್ ಜಿಬ್ರಾಲ್ಟರಿಗೆ ಮಾರ್ನಿಂಗ್ ಷೋ ನೋಡಲೆಂದು ಹೋಗಿದ್ದರು. ಅವರು ಅದಕ್ಕೆ ಮುಂಚೆ ವಿನೋಬಾ ಸಂದರ್ಶನ ಪಡೆದು, ಅವರ 'ಶಿಕ್ಷಣ ವಿಚಾರ' ಖರೀದಿಸಿದ್ದರು. ಅದು ಅವರ ಕೈಲೇ ಇತ್ತು. ಮುಗಿಲುಹಳ್ಳಿ ರೇಂಜ್ ಶಾಲಾ ಇನ್ಸ್‌ಪೆಕ್ಟರ್‌ರವರ ದಿವ್ಯ ಸನ್ನಿಧಾನವೂ, ಆ ದಿನ ಆಫೀಸ್ ಬಿಟ್ಟು ಮಾರ್ನಿಂಗ್‌ಷೋಗೆ ಬಿಜಯಂಗೈಸಿತ್ತು. ಸನ್ನಿಧಾನದ ಕೈಲೂ 'ಶಿಕ್ಷಣ ವಿಚಾರ'ವಿತ್ತು. ಮುಗಿಲುಹಳ್ಳಿ ಜಿಲ್ಲಾ ಡೀ ಇ ಪೋ ಸಾಹೇಬರವರೂ ಆ ದಿನ ತಮ್ಮ ಆಫೀಸನ್ನು ಬಿಟ್ಟು, ರೇಂಜಾಫೀಸಿಗೆ ಸರ್‌ಪ್ರೈಸಾ ವಿಸಿಟ್ ಕೊಟ್ಟು

ನಂತರ 'ಶಿಕ್ಷಣ ವಿಚಾರ'ವನ್ನು ಕೊಂಡು ಮಾರ್ನಿಂಗಾಷೋಗೆ ದಯಮಾಡಿಸಿದ್ದರು. ಆ ದಿನ ವಿದ್ಯಾಮಂತ್ರಿಗಳು ಮುಗಿಲುಹಳ್ಳಿಗೆ ದಯಮಾಡಿಸಿ 'ಶಿಕ್ಷಣ ವಿಚಾರ' ಕೊಂಡುಕೊಂಡರು. ಥಿಯೇಟರಿಗೆ ದಯಮಾಡಿಸಿದ್ದರು. ಅದೊಂದು ಅದ್ಭುತ ದಿನ. ವಿದ್ಯಾಭ್ಯಾಸ ರಂಗದಲ್ಲಿ ಮೌನ ಕ್ರಾಂತಿ.

ವಿನೋಬಾರವರು ಮುಗಿಲುಹಳ್ಳಿಯಿಂದ ನಿರ್ಗಮಿಸಿದರು. ಊರಿನ ತುಂಬಾ ಅವರ, ಅವರ ಪರಿವಾರದವರ, ಸರ್ವೋದಯದ ಮಾತೇ ಆಗಿದೆ. ಈ ದಿನ ಬೆಳಗ್ಗೆ ನಾವೆಲ್ಲ ಸಿನ್‌ಸಿನ್ಯಾಟಿ ಸರ್ಕಲಿನಲ್ಲಿ ನಿಂತಿದ್ದೆವು. ಗುಂಡರಗೋವಿಗಳ ತಂಡ. ಅಷ್ಟರಲ್ಲಿ ಶುದ್ಧ ಖಾದೀ ಸೀರೆ, ಖಾದೀ ಚೋಳಿಗಳನ್ನು ಧರಿಸಿದ ತರುಣಿಯರ ತಂಡ ಬಂತು. ಅವರು ನಮ್ಮನ್ನು ಪಕ್ಕಕ್ಕೆ ಬಿಟ್ಟು, ಸರಿದು ಹೋಗಲೇ ಇಲ್ಲ. ನಮ್ಮ ಗುಂಪನ್ನು ಸೀಳಿ ನಡುವೆಯೇ ಬಿರುಗಾಳಿಯಂತೆ ನುಗ್ಗಿ ನೇರವಾಗಿ ಹೋದರು. ನಾನು 'ಏ ಕ್ಯಾ ಹೈ, ಬಾಪ್ರೆ ಬಾಪ್' ಎಂದೆ. ನನ್ನ ಮಿತ್ರ ನನ್ನನ್ನು ಸಂತೈಸಿ 'ಲೋ ಇದೇ ಕಣೋ ಸರ್ವೋದಯ! ವಿನೋಬಾ ಹೇಳಲಿಲ್ಲವೆ? ಸ್ತ್ರೀಯರು ಅಬಲೆಯರಲ್ಲ ಅಂತ' ಎಂದ.

'ಹೇಳಿದ್ರು—ಅಂದ್ರೆ ಹೀಗೆ ಹೋಗ್ಬೇಕೇ?'

'ಹೌದಯ್ಯಾ ನಿನ್ನ ಕಷ್ಟ ತಿಳಿಯಿತು. ಆದರೂ ಯೋಚಿಸು. ನಿನಗೇ ತಿಳಿಯುತ್ತೇ. ಆ ಜರ್ಮನ್ ಲೇಡಿ ಹೇಮಾ ಡ್ರೆಸ್‌ಮಾಡಿಕೊಂಡಿದ್ದರಲ್ಲ. ಅದರ ತದ್ವತ್ ಡ್ರೆಸ್‌ಮಾಡ್ಕೊಂಡಿದ್ರು ಇವು ಹೌದೋ ಅಲ್ವೋ?'

'ಹೌದು.'

'ಹಾಗೇನೇ ಇನ್ನೊಬ್ಬ ಸರ್ವೋದಯ ಕಾರ್ಯಕರ್ತೆ, ಜನಗಳ್ಗೆ ಸರ್ಕೊಳ್ಳಿ ಅಂತ್ಲೂ ಹೇಳ್ದೆ ಕುಳಿತ ಜನಾನ ಆ ಕಡೆ ಈ ಕಡೆ ಸರಿಸಿ ನಡ್ಕೊಂಡು ಹೋದ್ರು. ಯದ್ಯದಾಚರತಿ ಶ್ರೇಷ್ಠಸ್ತತ್ರದೇವೇತರೋಜನಃ' ಎಂದ ನನ್ನ ಮಿತ್ರ. ನನಗೆ ಸರಿಯಾಗಿ ಅರ್ಥವಾಗುತ್ತಿಲ್ಲ.

ಅಡಿಟಿಪ್ಪಣಿ:—ತಮ್ಮ ಭಾಷಣದಲ್ಲಿ, ಮಾಲೀಕತ್ವದ ನಿರ್ಮೂಲನೆಗೆ ವಿನೋಬಾ ಕರೆಯಿತ್ತರಷ್ಟೆ. ಅದೊಂದಕ್ಕೆ ಮಾತ್ರ ನಮ್ಮೂರಿನ ಮಾಲೀಕರಲ್ಲಿ ಶೇಕಡಾ ೯೦ ಜನ ಮಾಲೀಕತ್ವ ನಿರ್ಮೂಲವಾಗಬೇಕೆಂದು ಒಪ್ಪಿದರು. ಟ್ಯಾಕ್ಸ್ ಹೊರೆ ಆಗ ತಪ್ಪುವುದೆಂಬುದೇ, ಒಪ್ಪಿಗೆಗೆ ಕಾರಣ. ನಮ್ಮೂರಿನ ಕಾರ್ಮಿಕರು ಯಾರೂ ಅದಕ್ಕೆ ಬೆಂಬಲ ಕೊಟ್ಟಿಲ್ಲ. ಇಂದಲ್ಲ ನಾಳೆ ಲಕ್ಷಾಧೀಶನಾದೇನು ಎಂಬ ಆಶೆ, ಹಗಲ್ಗನಸು, ನಿರೀಕ್ಷೆಗಳೇ ಅವರ ವಿರೋಧಕ್ಕೆ ಕಾರಣ. ಶಾಂತಿ ಸೇನೆ ಕಟ್ಟಬೇಕು; ಸ್ತ್ರೀಪುರುಷರು ಅದರಲ್ಲಿ ಭಾಗವಹಿಸಬೇಕು ಎಂಬ ವಿನೋಬಾ ವಾಣಿಗೆ ನಮ್ಮೂರಿನ old Prufrockಗಳ ಬೆಂಬಲ ಪೂರಾ ಇದೆ.

—ಅ.ರಾ.ಸೇ.

ಇಹಲೋಕ ನಾಕ

ಕೇಳಿದಿರ, ಕೇಳಿದಿರ, ನೀವಾತ ಹೇಳಿದುದ?
ಮಾಡುವಿರ, ಮಾಡುವಿರ, ನೀವಾತ ಹೇಳಿದಂತೆ?
ನಾನು ಮಾಡುವೆ! ನಲಿದು ಪಾಡುವೆ!
ನೂಕಿ ದೂಡುವೆ ಬಡತನ!
ಸಾಲ ಕೊಡುವರು, ಭೂಮಿ ಕೊಡುವರು,
ಬೀಜ ಕೊಡುವರು, ತೇಜ ಕೊಡುವರು.
ನಗರ ಸಡಗರ! ಬಸ್ಸ ಗಡಗಡ! ಉರಿವ ಟಾರಿನ ದಾರಿಯು
ತೊರೆದು ಮರೆಯುತ ಮೆರೆದು ಕುಣಿಯುತ ನಾನು ಹಳ್ಳಿಗೆ ಪೋಗುವೆ.
ಕೇಳಿದಿರ ನೀವಾತ ಹೇಳಿದುದ
ಕಾರಿನೊಳಗಡೆ ಕೂತು ಆತನು, ಎಂಟು ದಿಕ್ಕಿಗೂ ಹೇಳಿದ,
ಹೇಳಿ ಮುಗಿಸಿದ ಚಣವೆ ಕಾರಲಿ ಬೇರೊಂದೂರಿಗೆ ಹಾರಿದ.
ಅಲ್ಲಿ ಹಳ್ಳಿಲಿ, ಆತ ಹೇಳಿದ, ಅಳಿಲು ಕೋಗಿಲೆ ಸಂಗಡ
ಅಳಲ ಮರೆಯುತ, ಮರಳ ತೋಡುತ, ಅರಳ ಗಂಜಿಯ ಕುಡಿಯಿರಿ.
ಭೂಮಿ ಕನ್ಯೆಗೆ ನೇಗಿಲಂಚಲಿ ಕಚಕುಳಿಯು ನಾನೀಡಲು
ನಕ್ಕು ನಕ್ಕವಳಯ್ಯೊ ಎನುವಳು : ಅದುವೆ ಹಸುರು ಗದ್ದೆಯು!
"ಹಳ್ಳಿಜೀವನ ಪುಣ್ಯಜೀವನ, ರೈತನುತ್ತಮ ಸಾಧಕ.
ಮಂತ್ರಿಗಿಂತಲು ಅವನೆ ಹಿರಿಯವ;"—ಅಡ್ಡ ತೋರಣದಡಿಯಲಿ
ಕೊರಳ ಹಾರವ ಕಳಚಿ ಇರಿಸುತ ಆತ ಹೊಗಳಿದ ಈಪರಿ :
ಯೋಗಿಯಂತೆ ರೈತ, ಪಾಪ! ಬೆನ್ನುಮೂಳೆ ಅವನೆ ಅಂತೆ!
ನಾನು ಹೋಗಿ ಇನ್ನು ಮೇಲೆ ಬೆನ್ನು ಮೂಳೆ ಎನಿಸುವೆ!
ಬೆನ್ನು ಬಾಗಿಸಿ ದುಡಿವ ರೈತನೆ ಬೆನ್ನುಮೂಳೆ, ದೇಶಕೆ!

ಯೋಗಿಯಂತೆಯೆ ಮರದ ನೆರಳಲಿ ಮೂಗ ತುದಿಯನು ದಿಟ್ಟಿಸಿ
ಕುಳಿತರಲ್ಲೀ ದೇವ ತರುವನು ಕಡಲೆ ಬೇಳೆಯ ಪಾಯಸ!
ಕೇಳಿದಿರ ನೀವಾತ ಹೇಳಿದುದ?
ನೀಲಿ ಕಾರು ಫಳಫಳೆಂದು ಕಣ್ಣು ಕುಕ್ಕಿತು, ಅಲ್ಲವೆ?
ಹಳ್ಳಿ ಹಾಡು ಡಿಳ್ಳಿಯಲ್ಲಿ! ಹಳ್ಳಿ ಉಡಿಗೆ ಸಿನಿಮದಲ್ಲಿ!
ಹಳ್ಳಿ ಜನರಾ ಸರಳ ಒಡವೆ ಹಾಲಿವುಡ್ಡಿನ ಕಿವಿಯಲಿ!
ಆತ ಹೇಳಿದ ಮಾತೆ ಸಾಕು, ಎರಡು ಕಿವಿಗೂ ಲೋಲಕು!
ಕೃಷಿಗೆ ಮೂರೇ ತಿಂಗಳಷ್ಟೆ, ಶ್ರಮವು ಸಾಕೆಂದಾತ ಹೇಳಿದ,
ಉಳಿದ ಒಂಬತ್ತುವರಿಗರ್ಪಿಸಿ ಸೇವೆಯಲಿ ಮೈ ಸವೆಸಿರೊ!
ಕೇಳಿದಿರ ನೀವಾತ ನುಡಿದಾ ಅಚ್ಚಕನ್ನಡ ಭಾಷಣ!
ಗಾಳಿ ಬೆಳಕು ಹೂವು ಬಳ್ಳಿ ಹಾಲು ಬೆಣ್ಣೆ ಕೋಳಿ ಮೊಟ್ಟೆ
ಧೂಳಿ ಮುಂದೆ ದನದ ಹಿಂಡು, ಜೇನುಗೂಡು, ಸವಿನುಡಿ
ಪ್ರೇಮಗಾನ ನೃತ್ಯ ಗೀತ ಕೋಪ ತಾಪರಹಿತ ಬಾಳು
ಹಳ್ಳಿ ನಾಕ! ಹಳ್ಳಿ ಡಿಳ್ಳಿ!
ಕೇಳಿದಿರ ನೀವಾತ ಹೇಳಿದಾ ಮಾತ?
ಮೊಳಗಿತದು ಗೋಪುರದ ತುದಿಯುವರೆಗೂ.
ನಾನೇನೊ ಹೊರಡುವೆನು, ನಾಳೆ ಈ ಊರಿಂದ
ಸ್ವರ್ಗಸಮವೆಂದಾತ ಬಣ್ಣಿಸಿದ ಹಳ್ಳಿಗೆ
ಗಗನ ಸೀಮೆಯ ಗ್ರಾಮಕೆ.

—ಪಾರ್ಥಸಾರಥಿ.

ಶೀನಣ್ಣನೂ ವಿಧಿಯೂ

1. ಸೂರಪ್ಪನಿಗೆ ಸೈಕಲ್ ಕಲಿಸಿದ್ದು.

ಶೀನಣ್ಣ ೧೯೩೦ರಲ್ಲಿ ಸೈಕಲ್ ತೆಗೆದುಕೊಂಡ. ಅದೊಂದು ೧೯೧೮ ಮಾಡಲ್ ಫೋನಿಕ್ಸ್; ಸೈಜು ೨೬ ಇಂಚು. ಅದಕ್ಕಿದ್ದುದು ಸ್ಪ್ರಿಂಗ್ ಸೀಟು. ಶೀನಣ್ಣ ಕೊಂಡಾಗ ಆ ವಾಹನದ ಯೌವನ ಆಗಲೇ ಮುಗಿದುಹೋಗಿತ್ತು. ಶೀನಣ್ಣ ಅದಕ್ಕೆ ಎರಡು ಲೋಕಲ್ ಮೇಡ್ ಕಾಟರ್ ಪಿನ್ನುಗಳನ್ನೂ, ಸೀಟಿಗೆ ಅವರಪ್ಪನ ಹಳೆ ಪಂಚೆಯನ್ನೂ ಕೂಡಿಸಿದ ನಂತರವೇ ಅದು ಯಾನಕ್ಕೆ ಸಿದ್ಧವಾದದ್ದು. ಶೀನಣ್ಣ ಆಗ ನಮ್ಮೂರಿನಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ಸ್ಥಾಪಿಸಿದ್ದ. ಅದರ ಕೆಲಸಗಳಿಗೆ ಅನುಕೂಲವಾಗಲೆಂದೇ ಅವನು ಸೈಕಲ್ ಕೊಂಡ. ಬೆಲೆ ೧೫ ರೂ. ಮಾತ್ರ.

ಅದನ್ನು ಅವನು ಮೊದಲಬಾರಿ ಊರಿನಲ್ಲಿ ಸವಾರಿಮಾಡಿದ ಸಮಾರಂಭ ಅಭೂತಪೂರ್ವವಾದುದು. ಓಬಳಿಗ ಕುಂಟನಾದದ್ದೂ, ಬುಡ್ಡು ತಲೆ ಒಡೆದು ಕೊಂಡದ್ದೂ ಆಗಲೇ. ಆಗ ಸತ್ತ ಮೂರು ಕೋಳಿಪಿಳ್ಳೆಗಳನ್ನು ಜನ ಆಗಲೇ ಮರೆತಿದ್ದಾರೆ. ಆದರೂ ಅದು ಯಶಸ್ವೀಯಾನ. ನಂತರ ಶೀನಣ್ಣ ಸೈಕಲ್ ಸವಾರಿಯನ್ನು ಶಂಕರಣ್ಣನಿಗೆ ಕಲಿಸಿದ. ಆ ದಿನ ನಮ್ಮ ಅಪ್ಪ ಮೃತ್ಯುಂಜಯ ಜಪ ಮಾಡಿದ—ಶಾಂತ್ಯರ್ಥವಾಗಿ. ಶೀನಣ್ಣ ಊರ ಪುರೋಹಿತ. ಶಂಕರಣ್ಣ ನನ್ನ ಖಾಸಾ ಅಣ್ಣ. ಜೋಯ್ಸರ ಶೀನ ತಲೆ ಒಡೆದುಕೊಂಡರೆ ಅಪ್ಪ ಅಬ್ಜೆಕ್ಟ್ ಮಾಡಲು ಹೋಗುವಂತಿರಲಿಲ್ಲ. ಅಪ್ಪ ಆಗ ನಕ್ಕಿದ್ದ. ಆದರೆ ಅದು ಅವನ ಮಗನಿಗೇ ಬರುವುದೆಂದು ಅವ ಎಣಿಸಿರಲಿಲ್ಲ.

ಆಗ ಸೂರಪ್ಪ ಬೆನ್ನೂರಿನಲ್ಲಿ ಮೇಷ್ಟ್ರರಾಗಿದ್ದ. ಬೆನ್ನೂರು ನಮ್ಮೂರಿಗೆ ಐದು ಮೈಲಿ ದೂರದಲ್ಲಿದೆ. ಅಲ್ಲಿಗೆ ಓಡಾಡುವುದು ಅವನಿಗೆ ಬಲು ಕಷ್ಟವಾಗಿತ್ತು. ಹೊತ್ತಿಗೆ ಹೋಗುವುದು ಕನಸಿನ ಬುತ್ತಿ. ಬೆನ್ನೂರು ರೋಡ್ ಸೈಡ್ ಹಳ್ಳಿ. ಇನ್ಸ್‌ಪೆಕ್ಷನ್, ಸರ್‌ಪ್ರೈಸ್ ವಿಸಿಟ್ ಯಾವಾಗ ಎಂದರೆ ಆಗ ಘಟಿಸಬಹುದು. ಆದುದರಿಂದ ಸೂರಪ್ಪ ಸೈಕಲ್ ಕಲಿಯಲು ನಿರ್ಧರಿಸಿದ. ಶೀನಣ್ಣ ಸೈಕಲ್ ಕಲಿಸುವೆನೆಂದು ಆಶ್ವಾಸನೆ ಇತ್ತ.

ಶೀನಣ್ಣ ಸೈಕಲ್ ತಂದದ್ದು ಉದ್ರೆಮೇಲೆ. ಅವನಪ್ಪ, ವೆಂಕಪ್ಪ ದುಡ್ಡು ಕೊಡಲು ನಿರಾಕರಿಸಿದ. ಅಲ್ಲದೆ ಯಾರೂ ಇಲ್ಲದಾಗ ವೆಂಕಪ್ಪ ಸೈಕಲ್ ಹತ್ತಲು ಯತ್ನಿಸಿ ಕಡಿದುಕೊಂಡು ಬಿದ್ದ. ಆ ಸಮಯದಲ್ಲೇ ತಳವಾರ ತಿಪ್ಪಿ, ಗೊಲ್ಲರ ನಾಗಿ ಅಲ್ಲಿಗೆ ಬರಬೇಕೇ? ವೆಂಕಪ್ಪ ಆ ಸೈಕಲ್ಲನ್ನು ಕೆರೆಗೆಸೆದು ಬಾ ಎಂದು ಶೀನಣ್ಣನನ್ನು ಬಲಾತ್ಕರಿಸುತ್ತಿದ್ದ. ಹೀಗಾಗಿ ಆ ಸೈಕಲ್ಲನ್ನು ಮಾರಲು ಶೀನಣ್ಣ ನಿರ್ಧರಿಸಿದ. ಅದನ್ನು ಕೊಂಡುಕೊಳ್ಳಲು ಸೂರಪ್ಪ ಒಪ್ಪಿದ್ದರಿಂದಲೇ ಶೀನಣ್ಣ ಸೂರಪ್ಪನಿಗೆ ಆಶ್ವಾಸನೆ ಕೊಟ್ಟದ್ದು.

ಆದರೆ ಸೂರಪ್ಪನ ಎತ್ತರ ಕೇವಲ ನಾಲ್ಕೂವರೆ ಅಡಿ. ಅವನು ಸೈಕಲ್ ಹತ್ತುವುದು ಹೇಗೆ? ಶೀನಣ್ಣ ಇದಕ್ಕೊಂದು ಪರಿಹಾರ ಕಂಡುಹಿಡಿದ. ಸೂರಪ್ಪ ನಮ್ಮ ಮನೆಯ ಮುಂದಿನ ಬೇವಿನ ಕಟ್ಟೆಯಿಂದ ಸೈಕಲ್ಲನ್ನೇರಲು ಆರಂಭಿಸಿದ. ಅವನ ಬೆಂಗಾವಲಿಗೆ ಶೀನಣ್ಣ, ಶಂಕರಣ್ಣ ಇಬ್ಬರೂ. ಮಕ್ಕಳು ಯಾರೂ ಆ ದಾರಿಯಲ್ಲಿ ಸುಳಿಯಕೂಡದೆಂದು ಕಟ್ಟಪ್ಪಣೆ ಆಯ್ತು.

ಆದರೆ ವಿಧಿಯ ನಿರ್ಧಾರ ಇದಕ್ಕೆ ವಿರುದ್ಧವಾಗಿತ್ತು. 'ಸೂರಪ್ಪ ಸೈಕಲ್ ಕಲಿಯುವಂತೆಯೇ ಇಲ್ಲ' ಎಂಬುದೇ ವಿಧಿ ಸಂಕಲ್ಪ. ಶೀನಣ್ಣ ಇದನ್ನೆಲ್ಲಾ ಮೈಂಟ್ ಮಾಡುವವನಲ್ಲ. ಒಂದೂವರೆ ವಾರದೊಳಗಾಗಿ ಸೂರಪ್ಪ ತಾನೇ ಸೈಕಲನ್ನೇರುವಂತಾದ. ಸೂರಪ್ಪ ತಾನೊಬ್ಬನೇ ಸೈಕಲ್ ಹತ್ತಿ ಮೊದಲಬಾರಿ ಸವಾರಿಮಾಡಿದಾಗ ಆ ಶಕಟ ನೇರವಾಗಿ ದೊಡ್ಡಕೆರೆಯಂಗಳಕ್ಕೆ ಹೋಯ್ತು. ಅಲ್ಲಿದ್ದವರೆಲ್ಲಾ ದಿಕ್ಕಾಪಾಲಾಗಿ ಓಡಿದರು. 'ಸೂರಪ್ಪಾ ಟರ್ನ್‌ಮಾಡಿಕೋ' ಎಂದರು ಹಿಂದೆ ದೂರದಲ್ಲಿ ಓಡಿಬರುತ್ತಿದ್ದ ಶೀನಣ್ಣ, ಶಂಕರಣ್ಣ. 'ಸ್ಟಾಪ್ ಸ್ಟಾಪ್' ಎಂದ ಶಂಕರಣ್ಣ. ಸೂರಪ್ಪ ಸೀದಾ ನೀರಿಗೆ ನುಗ್ಗಿದ.

ಮರುದಿನ ಐಮಂಗಲ ಖಾದಿ ಕೇಂದ್ರದಲ್ಲಿ ಖಾದೀ ಟ್ರೈನಿಂಗ್ ಪಡೆಯಲು ಹೋಗಿಬಿಟ್ಟರು ಶೀನಣ್ಣ, ಶಂಕರಣ್ಣ. ಸೂರಪ್ಪ ಸೈಕಲ್ ಕೊಂಡುಕೊಂಡ.

ಅಭಿಮನ್ಯು, ಚಕ್ರವ್ಯೂಹವನ್ನು ಹೋಗುವುದನ್ನು ಮಾತ್ರ ಕಲಿತನಂತೆ. ಹಿಂತಿರುಗಿ ಬರುವುದನ್ನರಿತಿರಲಿಲ್ಲವಂತೆ. ಸೂರಪ್ಪನೂ ಹಾಗೇ; ಬೇವಿನಕಟ್ಟೆಯಿಂದ ಸೈಕಲ್ ಹತ್ತಿ ಸವಾರಿಮಾಡುವುದನ್ನು ಮಾತ್ರ ಕಲಿತ. ಇಳಿಯುವುದನ್ನಾಗಲೀ, ಲೆಫ್ಟ್, ರೈಟ್, ಎಬೌಟ್ ಟರ್ನುಗಳನ್ನಾಗಲೀ ಕಲಿಯಲೇ ಇಲ್ಲ. ಸೂರಪ್ಪ ಶೀನಣ್ಣನಿಗೆ ಕಾಗದ ಬರೆದ.

ಶೀನನಿಗೆ ಆ॥ಗಳು.

ಅಲ್ಲಲೇ ಶೀನ, ನಡುನೀರಲ್ಲಿ ಕೈಬಿಟ್ಟುಹೋದೆ. ಸೈಕಲ್ ಹತ್ತುವುದನ್ನು ಮಾತ್ರ ಕಲಿಸಿಹೋದೆ. ಇಳಿಯುವುದು ಬರುವುದೇ ಇಲ್ಲ. ಎಲ್ಲರೂ, ನನ್ನನ್ನು

ನೋಡಿದಾಗಲೆಲ್ಲ, "ಯಾಕೆ ಸೂರಪ್ಪ, ಸೈಕಲ್ ಇದ್ದೂ ಇದ್ದೂ ನಡೆದುಹೋಗುತ್ತೀ" ಎಂದು ಕೇಳುತ್ತಿದ್ದಾರೆ. ಜರೂರು ಕಾಗದ ಬರೆ. ಸೈಕಲ್ ಇಳಿಯುವುದು ಹೇಗೆ ಎಂಬುದನ್ನು ವಿವರವಾಗಿ ತಿಳಿಸು.

ಇ| ಆ|ಗಳು,
ಸೂರಪ್ಪ.

ಉತ್ತರ ಹೀಗೆಂದು ಬಂತು.

ಸೂರಪ್ಪನವರ ಪಾದಪದ್ಮಂಗಳಲ್ಲಿ ಶಿರಸಾಷ್ಟಾಂಗ ನ|ಗಳು.

ತರುವಾಯ ಉ. ಕು. ಸಾಂ. ಅಲ್ಲ ಸೂರಪ್ಪಾ ಅದು ಗೊತ್ತಿಲ್ವೇ? ಲೆಫ್ಟ್ ಬ್ರೇಕು ಮೊದಲು ಹಾಕು. ರೈಟ್ ಹಾಕಬೇಡ. ಆಮೇಲೆ ಲೆಫ್ಟ್ ಪೆಡಲಿನಮೇಲಿನ ಲೆಫ್ಟ್‌ಕಾಲನ್ನು ಹಾಗೇ ಇಟ್ಟು, ರೈಟನ್ನು ಕ್ಯಾರಿಯರ್‌ಮೇಲೆ ಅಥವಾ ಸೀಟಿನ ಮುಂದೆ ಎತ್ತಿ ಲೆಫ್ಟಿಗೆ ತಂದು ನೆಲಕ್ಕಿಡು. ಇಲ್ಲದಿದ್ದರೆ ಲೆಫ್ಟಿಗೆ ವಾಲಿ ಲೆಫ್ಟ್ ಲೆಗ್ಗನ್ನು ನೆಲದಮೇಲೆ ಇಟ್ಟು ಗಕ್ಕನೆ ಬ್ರೇಕ್ ಹಾಕಿ ರೈಟನ್ನು ಆಮೇಲೆ ಈಚೆಗೆ ತಾ. ದೇವರು ಶುಭವನ್ನು ಮಾಡಲಿ.

ಇ| ನ|ಗಳು,
ಶೀನ.

ಸೂರಪ್ಪ ಕನ್ನಡ ಲೋಯರ್ ಸೆಕೆಂಡರಿ ಮಾತ್ರ ಪಾಸಿದವನು. ಅವನಿಗೆ ಶೀನಣ್ಣನ ಕಾಗದ ಗೋಡೆಯಾಯ್ತು. ನಂತರ ಅವನು ತನ್ನದೇ ಆದೊಂದು ನವೀನ ವಿಧಾನ ಕಂಡುಹಿಡಿದ. ಬೆನ್ನೂರಿನ ಶಾಲೆ ಹುಡುಗರಲ್ಲಿ ನಾಲ್ಕುಜನ ಬಲವಾದ ಹುಡುಗರು ಊರಿನಿಂದ ಈಚೆ ರಸ್ತೆ ಪಕ್ಕದಲ್ಲಿ ಬಂದು ನಿಲ್ಲುವಂತೆ ಏರ್ಪಾಟು ಮಾಡಿದ. ಸೂರಪ್ಪ ಸೈಕಲ್ ಹತ್ತಿ ಬರುತ್ತಿದ್ದ—ಬೆಳಿಗ್ಗೆ ಆರೂಮುಕ್ಕಾಲಿಗೆ. ಸೂರಪ್ಪನ ಸೈಕಲ್ ಹಿಡಿದು, ತರುಬಿ ನಿಲ್ಲಿಸುತ್ತಿದ್ದರು—ಹುಡುಗರು. ಅಲ್ಲಿಂದ ವಾಪಸ್ ನಮ್ಮೂರಿಗೆ ಬಂದಾಗ, ನಮ್ಮೂರಿನ ಹೊರಗೆ ಸೈಕಲ್ ತರುಬುವ ಕೆಲಸ ಬೊಮ್ಮನಿಗೆ ವಹಿಸಿಕೊಡಲ್ಪಟ್ಟಿತ್ತು.

ಹೀಗಿರುವಾಗ ಒಂದುದಿನ D. E. O. ಸಾಹೇಬರು ಬೆನ್ನೂರು ಶಾಲೆಗೆ ಸರ್‌ಪ್ರೈಸ್ ವಿಸಿಟ್ ಕೊಟ್ಟರು. ಅವರನ್ನು ನೋಡುವ ಕುತೂಹಲದಲ್ಲಿ ಹುಡುಗರು ಆ ದಿನ ರಸ್ತೆಗೆ ಬರಲೇ ಇಲ್ಲ.

ಆ ದಿನ ಸೂರಪ್ಪ ಎಂದಿನಂತೆ ಆರೂಮುಕ್ಕಾಲಿಗೆ ಬೆನ್ನೂರಿಗೆ ಬಂದ. ಹುಡುಗರು ಕಾಣಿಸಲಿಲ್ಲ. ಜಂಘಾಬಲ ಉಡುಗಿತು. ಕೂಗಿದ ಯಾರೂ ಬರಲಿಲ್ಲ. 'ಬರ್ರ್ಯೋ ಹಿಡ್ಕಳ್ರ್ರೋ' ಎಂದು ಅರಚಿದ. ಕಾಲುಗಳು ಯಾಂತ್ರಿಕವಾಗಿ ತುಳಿಯುತ್ತಲೇ ಇದ್ದವು. ನೋಡು ನೋಡುತ್ತಿದ್ದಂತೆ ಸೈಕಲ್ ಮುಂದುವರಿಯಿತು. ಸ್ವಲ್ಪ

ಹೊತ್ತಿನಲ್ಲೇ ಸೂರಪ್ಪ ಕಾತರಾಳಿನ ದಾರಿಯನ್ನು ಉತ್ತರಿಸುತ್ತಿದ್ದ. ಕೆರೆ ಹಿಂಗಡೆಯ ದಿಗಂತದಲ್ಲಿ ಮರೆಯಾಯ್ತು. ಐಯನಹಳ್ಳಿ ಬಂತು. ರಸ್ತೆಯ ಪಕ್ಕದಲ್ಲಿ ಜನ ಓಡಾಡುತ್ತಿದ್ದರು. ನಾಲ್ಕಾರು ನಾಯಿಗಳು ಬೊಗಳುತ್ತಾ ಸೂರಪ್ಪನನ್ನು ಹಿಂಬಾಲಿಸಿದವು. 'ಹಿಡ್ಕೊಳ್ರೋ, ಹಿಡ್ಕೊಳ್ರೋ' ಎಂದು ಅವನು ಗೋಗರೆದ. ಜನ ನಾಯಿಗಳನ್ನು ಹಿಡಿದರೇ ಹೊರತು ಸೈಕಲ್ ಹಿಡಿಯಲಿಲ್ಲ. ಐಯನಹಳ್ಳಿ ಹಿಂದಾಯ್ತು. ಬಿಸಿಲು ಪ್ರಖರವಾಯ್ತು. ಸೂರಪ್ಪನ ಕಾಲುಗಳು ನೋಯುತ್ತಿದ್ದವು. ನಿಂತೀತೇನೋ ಎಂಬಾಸೆಯಿಂದ ಹ್ಯಾಂಡಲನ್ನು ಹಿಂದಕ್ಕೆ ಜಗ್ಗಿದ. ಲೆಫ್ಟನ್ನು ಒರಗಿಸಿ ರೈಟನ್ನು ಹಿಂದುಗಡೆಯಿಂದ ಲೆಫ್ಟಿಗೆ ತರುವುದೇ ಅವನ ಮುಂದಿದ್ದ ಸಮಸ್ಯೆ! ಬ್ರೇಕ್ ಯಾವುದು ?

ಬ್ರೇಕನ್ನು ಅದು ಏನೆಂದು ತಿಳಿಯದೆ ಒತ್ತಿದ. ಆದರೆ ಬ್ರೇಕ್ ರಬ್ಬರ್ ಇರಲೇ ಇಲ್ಲ ಸೂರಪ್ಪ ಶೀನನನ್ನು ಶಪಿಸಿದ. ವಿಧಿಯನ್ನು ಬೈದ. ಹೊಟ್ಟೆ ಸೂರಪ್ಪನನ್ನು ಶಪಿಸುತ್ತಿತ್ತು.

ಕೊನೆಗೆ ಚಿತ್ರದುರ್ಗ ಕಾಣಿಸಿತು. ಸೂರಪ್ಪ ತುಳಿಯುತ್ತಿದ್ದ. 'ಹಿಡ್ಕೊಳ್ರೋ ಸೈಕಲ್ನ' ಎಂದು ಕೂಗುತ್ತಲೂ ಇದ್ದ. ದುರ್ಗದ ನಾಯಿಗಳು ಸೂರಪ್ಪನ ಬೆನ್ನು ಹತ್ತಿದುವು. ಜೊತೆಗೆ ಹುಡುಗರೂ.

The dogs did bark, the children screamed ದುರ್ಗದಲ್ಲೂ ಸೂರಪ್ಪನನ್ನು ಯಾರೂ ನಿಲ್ಲಿಸಲಿಲ್ಲ. ಸೈಕಲ್ ಹೋಯಿತು. ಹೋಯಿತು. ಮುಂದೆ ಬಸ್ಸುಗಳು ಬಂದಾಗ ಸೂರಪ್ಪ 'ಅಯ್ಯಯ್ಯೋ ಹೋದ್ನೆಪ್ಪ' ಎಂದು ಅರಚುತ್ತಿದ್ದ. ಬಸ್ಸುಗಳು ದಾರಿಬಿಟ್ಟು ಹೋದವು. ಹನ್ನೆರಡಾಗುತ್ತಾ ಬಂತು.

ಸೂರಪ್ಪ ತುಳಿಯುತ್ತಲೇ ಇದ್ದ. ಅವನಿಗೆ ಕಾಲ ದೇಶ ವರ್ತಮಾನಗಳೆಲ್ಲಾ ಮರೆತುಹೋದವು. ಅವನು ಹತಾಶನಾದ.

ಕೊನೆಗೆ ಯಾವುದೋ ಊರು ಬಂತು. ಸೂರಪ್ಪ ಮತ್ತೆ ಹಿಡ್ಕೊಳ್ರೊ ಭಜನೆ ಆರಂಭಿಸಿದ. ಅಷ್ಟರಲ್ಲಿ ದಾರಿಯ ಮಧ್ಯೆ ಎಮ್ಮೆ ಬಂತು. ಸೈಕಲ್ಲು ಅದಕ್ಕೆ ಡಿಕ್ಕಿ ಹೊಡೆದು ಬಲಕ್ಕೆ ತಿರುಗಿತು. ಈ ಮಧ್ಯೆ ಕ್ಲಚ್ ಫೈಲಾಯಿತು. ಸೂರಪ್ಪ ಕೊನೆ ಗಾಲ ಬಂತೆಂದು ಕಣ್ಣುಚ್ಚಿ ರಾಮಸ್ಮರಣೆಮಾಡಿದ.

ಎಚ್ಚರವಾದಾಗ, ಶೀನಣ್ಣ ಶಂಕರಣ್ಣ ಅವನನ್ನು ಉಪಚರಿಸುತ್ತಿದ್ದರು. ಅನಾಹುತ ನಡೆದುದು ಐಮಂಗಲದಲ್ಲೇ. ನಮ್ಮೂರಿಗೆ ಅದು 35 ಮೈಲು ದೂರ. ಆ ಸಂಜೆ ಸೂರಪ್ಪನಿಗೆ ಸೈಕಲ್ ಇಳಿಯುವುದನ್ನು ಹೇಳಿಕೊಡಲು ಶೀನಣ್ಣ ತೊಡಗಿದ. ಸೂರಪ್ಪ ಇನ್ನು ಸೈಕಲ್ಲನ್ನು ಕಣ್ಣೆತ್ತಿನೋಡುವುದೂ ಇಲ್ಲ ಎಂದ. ಅದನ್ನು ಶೀನಣ್ಣ

ನಿಗೆ ದಾನಮಾಡಿಬಿಟ್ಟ. ಎರಡು ದಿನದ ನಂತರ ಊರಿಗೆ ಬಂದ. ಇದಾದ ಒಂದು ವಾರಕ್ಕೆ ಶೀನಣ್ಣನಿಗೆ ಒಂದು ಕಾಗದ ಬಂತು.

ಎಲೋ ನರಕುರಿ,

ಇದನ್ನು ಬರೆಯುವ ನಾನು ವಿಧಿ. ನಿನ್ನ ಮೇಲೆ ನನ್ನದೊಂದು ಮಾಶೆ. ಸೂರಪ್ಪನಿಗೆ ಸೈಕಲ್ ಹೇಳಿಕೊಡುವೆಯೋ? ಮೂರ್ಖ! ನಿನ್ನಂತಹ ಬಡಗನಾಡು ಬಕರನಿಗೆ ನಾನು ಜಗ್ಗುವುದಿಲ್ಲ.

ಇಂತು ನಿಮ್ಮಪ್ಪ,
ವಿಧಿ.

---

2. GO BACK VICEROY!

ಐಮಂಗಲದಿಂದ ನಮ್ಮ ಊರಿಗೆ ಹಿಂತಿರುಗಿದ ಮೇಲೆ ಶೀನಣ್ಣ ಇನ್ನೂ ಅನೇಕ ಬಾರಿ ವಿಧಿಯಿಂದ ಪೆಟ್ಟುತಿಂದ. ಅವನ ಇಚ್ಛೆಗೆ ವಿರುದ್ಧವಾಗಿ ಅವನ ಮದುವೆ ಆಯ್ತು. ಅವನು ಕುಳಿತ ಯಾವ ಪರೀಕ್ಷೆಯಲ್ಲೂ ಪೂರಾ ಪಾಸಾಗಲಿಲ್ಲ. ಅಲ್ಲದೆ ಅವನ ಪರಮಾಪ್ತ ಮಿತ್ರ ಶಂಕರನನ್ನು ವಿಧಿ, ದಾವಣಗೆರೆಗೆ ಕೊಂಡೊಯ್ದಿತು. ಆದರೆ ಶೀನಣ್ಣ ಪ್ರೋಮಿಥಿಯಸನಂತೆ defied the power which seemed omnipotent. ವಿಧಿ ಶೀನಣ್ಣನ ಸೈಕಲ್ಲಿನ ಮೇಲೂ ಕಣ್ಣುಹಾಕಿತು. ವಿಧಿ ವಶವಾಗಿ ಆ ಸೈಕಲ್ಲು ಕಿರುಗುಡಲಾರಂಭಿಸಿತು. ಸೀಟಿಗೆ ಹಾಕಿದ್ದ ವೆಂಕಪ್ಪನ ನೀರುಪಂಚೆ ಕೊಳೆತಹಾಗಾಗಿ ಸೈಕಲ್ ದುರ್ವಾಸನಾಪೂರಿತ ವಾಯ್ತು. ರಿಂಗಳು ಬೆಂಡೆ ಬಂದವು. ಆಕ್ಸಲ್ ಆಗಾಗ ಬಾಗಿ ಬಳುಕಿ ನರ್ತಿಸುತ್ತಿತ್ತು. ಅಲ್ಲದೆ ಅದು ಕಳೆದುಹೋಗಲಾರಂಭಿಸಿತು. ಕಳೆದುಹೋಯಿತೆಂದು ಶೀನಣ್ಣ ಸಂತೋಷಪಡುತ್ತಿರುವಷ್ಟರಲ್ಲೇ ಕಳ್ಳರು ಅದನ್ನು ತಂದೆಸೆದು ಹೋಗುತ್ತಿದ್ದರು.

1937–38ನೇ ಸಾಲಿನಲ್ಲಿ ವೈಸ್‌ರಾಯ್ ಬೆಂಗಳೂರಿಗೆ ಬಂದವರು ರೈಲಿನಲ್ಲಿ ಪುಣೆಗೆ ಹೋಗಲಿದ್ದರು. ಚಿತ್ರದುರ್ಗ ಜಿಲ್ಲಾ ಕಾಂಗ್ರೆಸ್ಸಿನವರು ದಾವಣಗೆರೆಯಲ್ಲಿ ಕಪ್ಪುಬಾವುಟ ಹಿಡಿದು ಮತಪ್ರದರ್ಶನ ಮಾಡಲು ನಿರ್ಧರಿಸಿದರು. ಈ ಪ್ರದರ್ಶನ ನಡೆಯಕೂಡದೆಂದು ವಿಧಿ ನಿರ್ಧರಿಸಿತು. ವಿಧಿ ಸಂಕಲ್ಪವನ್ನರಿಯದ ಸ್ವಯಂಸೇವಕರು ಚಿತ್ರದುರ್ಗದಿಂದ ದಾವಣಗೆರೆಗೆ ಬಸ್ಸಿನಲ್ಲಿ ಹೊರಟರು. ಅದೇ ಬಸ್ಸಿನಲ್ಲೇ C. I. D. ಶ್ರೀ ಗುಂಡಾಚಾರಿ ಉರ್ಫ್ ಗುಂಡಿಯೂ ಇದ್ದ. ಆ ಬಸ್ಸು ನಮ್ಮೂರಿಗೆ ಬಂದಾಗ ಸಂಜೆ ಐದು ಗಂಟೆ. ನಮ್ಮೂರಿನಲ್ಲಿ ನಿಂತ ಬಸ್ಸು ಸ್ಟಾರ್ಟ್

ಆಗಲೇ ಇಲ್ಲ. ಬಸ್ ಕೆಟ್ಟುಹೋಯಿತೆಂದು ಸಾರಲಾಯ್ತು. ಸ್ವಯಂಸೇವಕರು ಊರಿನೊಳಕ್ಕೆ ಲೋಕಲ್ ಕಾಂಗ್ರೆಸ್ ಛೀಫ್ ಶೀನಣ್ಣನನ್ನು ನೋಡಲು ಬಂದರು. ಇವರು ಊರೊಳಕ್ಕೆ ಬಂದ ಕೂಡಲೇ ಬಸ್ ಸ್ಟಾರ್ಟ್ ಆಗಿ ದಾವಣಗೆರೆಗೆ ದೌಡು ಓಡಿತು. ಗುಂಡಿ ವಿಶಾಸ ತಿರುವಿ ನಸುನಕ್ಕು ತಾನೂ ಊರೊಳಕ್ಕೆಬಂದ.

ಶೀನಣ್ಣ ಮರುದಿನ ಬೆಳಗಿನೊಳಗಾಗಿ ಸ್ವಯಂಸೇವಕರನ್ನು ದಾವಣಗೆರೆಗೆ ಸೇರಿಸುವುದಾಗಿ ಶಪಥಮಾಡಿದ. ಗೋಪನಾಳು ನಿಂಗನ ಎತ್ತಿನಗಾಡಿಯಲ್ಲಿ ಪ್ರಯಾಣ ಬೆಳೆಸಬೇಕೆಂದು ತೀರ್ಮಾನಿಸಿದ. ಆದರೆ ಗುಂಡಿ ಗೋಪನಾಳು ನಿಂಗ ನನ್ನು ಬೆದರಿಸಿದ. ನಿಂಗ ತಾನು ಗಾಡಿ ಹೂಡುವುದಿಲ್ಲವೆಂದ. ಶೀನಣ್ಣ ಗುಂಡಿ ಯನ್ನು ತರಾಟೆಗೆ ತೆಗೆದುಕೊಂಡ. 'ಲೋ ಗುಂಡಿ, ನಾಳೆ ವೈಸ್‌ರಾಯ್ ಮುಂದೆ ಕಪ್ಪು ಬಾವುಟ ಹಿಡಿಯದಿದ್ದರೆ ನಾನು ಗಾಂಧೀ ಶಿಷ್ಯನೇ ಅಲ್ಲ, ಬಡಗನಾಡಿನವನೇ ಅಲ್ಲ' ಎಂದು ಶಪಥಮಾಡಿದ. 'ನಡೆದೇ ದಾವಣಗೆರೆಗೆ ಹೋಗೋಣ' ಎಂದು ಸ್ವಯಂಸೇವಕರಿಗೆ ಸೂಚಿಸಿದ. ಅವರು ಒಪ್ಪಲಿಲ್ಲ. ಶೀನಣ್ಣ ಎಮ್ಮೇಹಟ್ಟಿಗೆ ಹೋಗಿ ಗಾಡಿ ಕಟ್ಟಿಸಿಕೊಂಡು ನಮ್ಮೂರಿಗೆ ಬಂದ. ಆದರೆ ಈ ಮಧ್ಯೆ ಬಂದ ಕಾಂಗ್ರೆಸ್ ವ್ಯಾನಿನಲ್ಲಿ ಸ್ವಯಂಸೇವಕರು ದಾವಣಗೆರೆಗೆ ಹೋಗಿಬಿಟ್ಟಿದ್ದರು. ಶೀನಣ್ಣ ತಂದ ಗಾಡಿಗಳನ್ನೂ ಗುಂಡಿ ಬೈದುಮಾಡಿದ. ಶೀನಣ್ಣ ತನ್ನ ಪ್ರತಿಜ್ಞೆಯನ್ನು ಇನ್ನೊಮ್ಮೆ ಉಚ್ಚರಿಸಿ ಗಂಡಸಾಗಿದ್ದರೆ ನನ್ನನ್ನು ಅರೆಸ್ಟ್‌ಮಾಡು ಎಂದು ಗುಂಡಿಗೆ ಛಾಲೆಂಜ್ ಹಾಕಿದ. ವಿಧಿ ಶೀನಣ್ಣನ ಬಾಲಭಾಷೆಯನ್ನು ಕೇಳಿ ಮತ್ತೆ ನಕ್ಕಿತು.

ರೋಷಭರಿತ ಶೀನಣ್ಣ ಮನೆಗೆ ಹೋದ. ಆಗ ರಾತ್ರಿ ಹತ್ತು ಗಂಟೆ. ಶೀನಣ್ಣನ ಅಮ್ಮ ಮಹಾಲಕ್ಷ್ಮಕ್ಕ ಆಗಿನ್ನೂ ಅನ್ನಕ್ಕೆ ಎಸರಿಟ್ಟಿದ್ದಳು. ಶೀನಣ್ಣ "ಅಮ್ಮಾ ನನಗೆ ಊಟಕ್ಕೆ ಹೊತ್ತಿಲ್ಲ. ನಾನು ದಾವಣಗೆರೆಗೆ ಹೋಗಬೇಕು" ಎಂದ. "ಸೈಕಲ್ ಎಲ್ಲಿ ?" ಎಂದು ಪ್ರಶ್ನಿಸಿದ. "ಅಯ್ಯೋ ಶೀನಾ, ನಿನ್ನೇನೇ ಕದ್ಕೊಂಡು ಹೋಗ್ಲಿ ಲ್ಲೇನೋ ನಿನ್ಸೈಕಲ್ನ?" ಎಂದಳು ಅವರಮ್ಮ. ಶೀನಣ್ಣ ಸ್ವಯಂಸೇವಕನ ಉಡುಪು ಹಾಕಿಕೊಂಡ. ಅವರಮ್ಮನ ಕರೇಸೀರೆಯನ್ನು ಹರಿದು ಒಂದು ಬಾವುಟ ಮಾಡಿ ಕೊಂಡ. ಮಡಿಕೋಲನ್ನು ಅರ್ಧಕ್ಕೆ ಮುರಿದು ಒಂದರ್ಧವನ್ನು ಲಾಠಿಯಾಗಿ ಹಿಡಿದು ಮನೆಯನ್ನು ಬಿಟ್ಟು ಹೊರಟೇಬಿಟ್ಟ.

ಬೆಳದಿಂಗಳು ಹಾಲಿನಂತೆ ಹರಡಿತ್ತು. ಶೀನಣ್ಣ ವೇಗವಾಗಿ ನಡೆಯುತ್ತಾ ಎಮ್ಮೆಹಟ್ಟಿ ಕೆರೆ ಏರಿಗೆ ಬಂದ. ಅಷ್ಟರಲ್ಲಿ ಅವನ ಮೂಗಿಗೆ ದುರ್ವಾಸನೆ ಬಡಿಯ ಲಾರಂಭಿಸಿತು. ಶೀನಣ್ಣ ಅದೇ ದಿಕ್ಕಿಗೆ ಹೋದ. ಸ್ವಲ್ಪ ದೂರದಲ್ಲಿ ಪೊದೆಯೊಂದರ ಹಿಂದೆ ಒಂದು ಸೈಕಲ್ಲೂ, ಒಬ್ಬ ಮನುಷ್ಯನೂ ಮಲಗಿದ್ದವು. ಶೀನಣ್ಣನದೇ ಆ ಸೈಕಲ್ ! ಶೀನಣ್ಣ ಅದನ್ನು ಸಪ್ಪಳವಿಲ್ಲದಂತೆ ಎಬ್ಬಿಸಿ ರಸ್ತೆಗೆ ದಬ್ಬಿಕೊಂಡು ಬಂದು

ಹತ್ತಿಬಿಟ್ಟ. 'ಭಾರತ್‌ಮಾತಾಕಿ ಜೈ' 'ಗಾಂಧಿಕೀ ಜೈ' 'Go back viceroy, ಎಂದು ದಾವಣಗೆರೆಯತ್ತ ಸಾಗಿದ.

ಶೀನಣ್ಣ ದಾವಣಗೆರೆ ತಲುಪಿದಾಗ ಆರು ಗಂಟೆ. ತಲುಪಿದವನೇ ನೆಟ್ಟನೆ ಶಂಕರನ ಮನೆಗೆ ಹೋದ. ಶಂಕರಣ್ಣ ಕಾಫಿಮಾಡಿಕೊಟ್ಟ. ಶೀನಣ್ಣ, ಶಂಕರಣ್ಣ ಇಬ್ಬರೂ ಕಾಂಗ್ರೆಸ್ ಆಫೀಸಿಗೆ ಹೋದರು. ಅಲ್ಲಿ ದುರ್ವಾರ್ತೆ ಕೇಳಿಬಂತು.

ಚಿತ್ರದುರ್ಗದ ಸತ್ಯಾಗ್ರಹಿಗಳು ಬಂಧಿಸಲ್ಪಟ್ಟಿದ್ದರು. ದಾವಣಗೆರೆಯಲ್ಲಿ ಮತ ಪ್ರದರ್ಶನ ಮಾಡುವ ಸತ್ಯಾಗ್ರಹಿಗಳಾರೂ ಮುಂದೆ ಬಂದಿರಲಿಲ್ಲ.

ಹಿಸ್ ಎಕ್ಸಲೆನ್ಸಿ ಲಾರ್ಡ್ ಕಟರ್ ಬ್ರೆತ್ ಅಥವಾ ಡಫರಿ ಅಥವಾ ವಿಲ್ಲಿಂಗ್ಡ; ಅಂತೂ, ಲಾರ್ಡ್ ಎಂಥವನೋ ಒಬ್ಬ ಆ ದಿನ ಬ್ರಿಟಿಷ್ ಸಾಮ್ರಾಜ್ಯದ ಪ್ರತಿನಿಧಿಯಾಗಿ ಬರಲಿದ್ದ. ದಾವಣಗೆರೆ ಅವನಿಗೆ ಅದ್ಭುತ ಸ್ವಾಗತ ಕೊಡಲಿತ್ತು. ಭಾರತೀಯರಿಗೆ ಸ್ವಾತಂತ್ರ್ಯ ಬೇಕು ಎಂಬುದೇ ಅವನಿಗೆ ತಿಳಿಯುವಂತಿರಲಿಲ್ಲ. ವಿಧಿಮಾಯೆ! ಭಾರತೀಯರ ಕ್ಲೈಬ್ಯ! ಪೋಲೀಸರ ದಬ್ಬಾಳಿಕೆ!

ಶೀನಣ್ಣನ ಕಣ್ಣುಗಳಲ್ಲಿ ಕಂಬನಿಗಳುರುಳಿದವು. ರೋಮಾಂಚನವಾಯ್ತು. ಯಾರೂ ಬೇಡ, ನಾನೊಬ್ಬನೇ ಕಪ್ಪು ಬಾವುಟ ಹಿಡಿಯುತ್ತೇನೆ; ಗೋ ಬ್ಯಾಕ್ ಕಟರ್ ಬ್ರೆತ್ ಎಂದು ಕೂಗುತ್ತೇನೆ; ವಿಧಿಯನ್ನು ಇದಿರಿಸುತ್ತೇನೆ, ಎಂದು ನಿರ್ಧರಿಸಿ ರೈಲ್ವೆ ಸ್ಟೇಷನ್‌ಗೆ ಹೋದ.

ವೈಸ್‌ರಾಯರ ರೈಲುಗಾಡಿ ಬರಲು ಇನ್ನು ಸ್ವಲ್ಪೇ ಹೊತ್ತಿತ್ತು. ಜನ ಸ್ಟೇಷನ್ನಿನ ಹಿಂದಿನ ಮೈದಾನದಲ್ಲಿ ಕಿಕ್ಕಿರಿದು ನೆರೆದಿದ್ದರು. ಶೀನಣ್ಣ ಶಂಕರಣ್ಣ ಹೋದರು. ಅಲ್ಲಿದ್ದ ಬೇವಿನಕಟ್ಟೆ ಹತ್ತಿದರು. ಶಂಕರಣ್ಣ 'ಮಹನೀಯರೇ' ಎಂದ. ಜನ ಅವರ ಕಡೆ ತಿರುಗಿದರು. 'ಶೀನಣ್ಣನವರು ಭಾಷಣ ಮಾಡಲಿದ್ದಾರೆ ಕೇಳಿರಿ' ಎಂದ. ಶೀನಣ್ಣ ತನ್ನ ಭಾಷಣದಲ್ಲಿ ತಾನು ಬಂದ ಉದ್ದಿಶ್ಯ ತಿಳಿಸಿದ. ಜನರು ವೈಸ್‌ರಾಯರಿಗೆ ಸ್ವಾಗತ ಕೊಡಕೂಡದೆಂದು ವಿವರಿಸಿದ. ಭಾಷಣ ಮುಂದುವರಿಸುವ ಮೊದಲು ಒಂದು ಚಿಟಿಗೆ ನಶ್ಯ ಹಾಕುತ್ತೇನೆ, ಎಲ್ಲರೂ ನಿಶ್ಶಬ್ದವಾಗಿರಿ, ಎಂದು ಪ್ರಾರ್ಥಿಸಿದ. ನಶ್ಯ ಮುಗಿದುಹೋಗಿತ್ತು. ಶಂಕರಣ್ಣ ನಶ್ಯ ತರಲು ಹೋದ.
ಆಗ, ಶೀನಣ್ಣನ ಭಾಷಣ ಕೇಳಲು ನೆರೆದ ಸಭೆಗೆ ಇನ್ನಿಬ್ಬರು ಬಂದು ಕೂಡಿದರು. (1) C. I. D. ಸ॥ ಇ॥ ಗುಂಡಿ, (2) ನಾರ್ತ್ ರೇಂಜ್ ಟೈಗರ್ ಮೋಹಿಯುದ್ದೀನ್. ಶೀನಣ್ಣ ಅವರನ್ನು ನೋಡಲಿಲ್ಲ. ಭಾಷಣವನ್ನೂ ಮುಂದುವರಿಸಲಿಲ್ಲ. ನಶ್ಯಕ್ಕಾಗಿ ಕಾಯುತ್ತಿದ್ದ.

ಇದ್ದಕ್ಕಿದ್ದ ಹಾಗೇ ದೂರದತ್ತ ರೈಲ್ವೆ ಇಂಜಿನು ಸೀಟಿ ಹಾಕಿತು. ಗುಂಡಿ 'ವೈಸ್‌ರಾಯ್ ಬಂದರು' ಎಂದು ಕೂಗುತ್ತಾ ರೈಲ್ವೆ ಸ್ಟೇಷನ್ ಕಡೆ ಓಡಿದ. ಜನ

ಶೀನಣ್ಣನನ್ನೂ ಭಾರತಮಾತೆಯನ್ನೂ ಮರೆತು ಸ್ಟೇಷನ್ ಕಡೆ ಹೋದರು. ನಾರ್ತ್ ರೇಂಜ್ ಟೈಗರ್ ಮೋಹಿಯುದ್ದೀನ್ ಶೀನಣ್ಣನನ್ನು ಅರೆಸ್ಟ್ಮಾಡಿ ಪೋಲೀಸ್ ಸ್ಟೇಷನ್ನಿಗೆ ಎಳೆದೊಯ್ದ. ವಿಧಿ, ತೃಪ್ತಿಯ ನಗುನಕ್ಕು ತನ್ನೆದುರಿನ ದೋಸೆ ತಿನ್ನಲಾರಂಭಿಸಿತು. ಜನ ಓಡಿಹೋಗಿ ನೋಡಿದ್ದು ಅಡ್ವಾನ್ಸ್ ಟ್ರೈನು. ವೈಸ್‌ರಾಯ್ 15 ನಿಮಿಷ ತಡವಾಗಿ ಬಂದರು. ಅವರಿಗೆ ಅಭೂತಪೂರ್ವ ಸ್ವಾಗತ ದೊರೆಯಿತು. ಬ್ರಿಟಿಷ್ ಚಕ್ರವರ್ತಿಯಲ್ಲಿ ಜನತೆಗಿದ್ದ ನಿಷ್ಠೆಯನ್ನು ಕಂಡು ಆತ ತೃಪ್ತಿಪಟ್ಟ.

ಇತ್ತ ಪೋಲೀಸ್ ಸ್ಟೇಷನ್ನಲ್ಲಿ ಶೀನಣ್ಣನನ್ನು ಕೂಡಿಹಾಕಲು ಜಾಗ ಇರಲಿಲ್ಲ. ಒಂದು ಕೋಣೆಯಲ್ಲಿ ಒಬ್ಬ ಹುಚ್ಚ, ಇನ್ನೊಂದರಲ್ಲಿ ಒಬ್ಬ ಕೊಲೆಪಾತಕಿ. ಆದ್ದರಿಂದ ಮೋಹಿಯುದ್ದೀನ್ ಶೀನಣ್ಣನನ್ನು ಸ್ಟೇಷನ್ನಿನ ಹಿಂದಿನ ವೆರಾಂಡದಲ್ಲಿ ಕುಳ್ಳಿರಿಸಿ ಕಾವಲಿಗೆ ಇಬ್ಬರು ಸೆಂಟ್ರಿಗಳನ್ನಿಟ್ಟ. ಪೋಲೀಸ್ ಸ್ಟೇಷನ್ ಹಿತ್ತಿಲಿನ ಹಿಂದೆಯೇ ರೈಲು ದಾರಿ ಇದೆ. ಶೀನಣ್ಣ ಹತಾಶನಾಗಿ ಕುಳಿತ. 'ವೈಸ್‌ರಾಯ್‌ಕೀ ಜೈ' ಎಂಬ ಕೂಗು ಕೇಳಿತು. ಶೀನಣ್ಣ ಸಿಟ್ಟಿನಿಂದ ಹಲ್ಕಡಿದ. ಆಗ ನೆನಪಾಯ್ತು. ಕರೀ ಬಾವುಟ ಜೇಬಿನಲ್ಲೇ ಇದೆ! ಲಾಠಿ ಕೈಲೇ ಇದೆ! ಟ್ರೈನು ರೈಲ್ವೆ ಸ್ಟೇಷನ್ ಬಿಟ್ಟು ಹೊರಟಿತು. ವೈಸ್‌ರಾಯರು ಪೋಲೀಸ್ ಸ್ಟೇಷನ್ ಮೇಲೆ ಗಂಡಬೇರುಂಡ, ಯೂನಿಯನ್ ಜಾಕ್‌ಗಳು ಹಾರುವುದನ್ನೇ ನೋಡುತ್ತಿದ್ದರು. ವೈಸರೀನ್ ಆ ಧ್ವಜಗಳನ್ನು ನೋಡುತ್ತಾ 'what a might—that of England's, Bill' ಎನ್ನುತ್ತಿದ್ದರು. ವೈಸರಾಯರು ಕಿಟಕಿಯಲ್ಲಿ ಪೋಲೀಸ್ ಸ್ಟೇಷನ್ ಹಿತ್ತಿಲನ್ನು ನೋಡುತ್ತಿದ್ದರು.

ವರಾಂಡದಲ್ಲಿ ತೆಳ್ಳನೆಯ ವ್ಯಕ್ತಿಯೊಂದು ಕೈಯೆತ್ತಿ ನಿಂತಿತ್ತು. ಕೈಯಲ್ಲಿ ಕರಿಯ ಧ್ವಜವಿತ್ತು. ಬಾಯಿ ತೆರೆದಿತ್ತು. 'Go back Viceroy' 'Go back ಕಟರ್ ಬ್ರೈತ್' 'Go back ಟೈರೆಂಟ್' 'ವೈಸ್‌ರಾಯ್ ತೊಲಗು' 'ಭಾರತ್ ಮಾತಾಕಿ ಜೈ' ಎಂಬ ಕೂಗು ಕಿವಿಗೆ ಬಿದ್ದವು. ವೈಸ್‌ರಾಯ್ ತಲೆ ತಿರುಗಿತು. ರೈಲು ಮುಂದೆ ಹೋಯ್ತು. ಅತ್ತ ವಿಧಿಯ ಗಂಟಲಿನಲ್ಲಿ ದೋಸೆ ಸಿಕ್ಕಿಕೊಂಡಿತು. ವಿಧಿ ಮೂರ್ಛೆ ಬಿತ್ತು.

ಎರಡು ದಿನದ ನಂತರ ವಿಧಿ ಹಾಸಿಗೆಯ ಮೇಲೆ ಕುಳಿತಿತ್ತು. ಡಾಕ್ಟರು ವಿಧಿಯನ್ನು ಪರೀಕ್ಷಿಸಿ, 'It is all right except for a slight depression. Have a bottle of brandy' ಎಂದು ಹೇಳಿದರು. ವಿಧಿ ಹಾಗೇ ಮಾಡಿತು. ಆಗ ವಿಧಿಯ ಆಳು ಪೋಸ್ಟ್ ತಂದಿಟ್ಟ. ಮೊದಲನೆಯ ಪತ್ರವೇ ಹೀಗಿತ್ತು.


ಎಲೈ ಬೆಂದ ವಿದಿಯೇ,

ನಿನ್ನ ಕೈಲಾದುದನ್ನು ನೀನು ಮಾಡಿದೆ. ಆದರೆ ನನ್ನ ವರಸೆ ನಿನಗೇನು ಗೊತ್ತು? ನಾನು ಬಡಗನಾಡಿನವ, ನನ್ನ ಹೆಸರು ಶೀನ. ನಿನ್ನ ಹಸ್ತಕ ಮೋಹಿದೀನನಿಗೆ ಎರಡು ತಿಂಗಳು ಸಸ್ಪೆಂಡಾಯ್ತು. ವೈಸ್‌ರಾಯ್ 'ಗೋ ಬ್ಯಾಕ್ ಕಟರ್ ಬ್ರೆತ್' ಎಂಬ ಘೋಷಣೆ ಕೇಳಲೇ ಬೇಕಾಯ್ತು. ನಿನ್ನ ಮೇಲೆ ನನ್ನದೊಂದು ಮಾಶೆ.

ಇತಿ ನಿನ್ನ ಬಡಗನಾಡು ಬಚ್ಚ,
ಶೀನ.

ವಿಧಿ ಈ ಪತ್ರವನ್ನೋದಿ ಹಲ್ಕಡಿದು, ಸಿಗರೇಟ್ ಹಚ್ಚಿ "ದೇಖಾ ಜಾಯೆಗಾ" ಎಂದಿತು.

—ಅ.ರಾ.ಸೇ.



ಗಂಡು—ಹೆಣ್ಣು

ರೇಗಿದ್ದೆ. ರೇಗೂಂತ ಅಂದರೆ ಅಂತಿಂಥಾ ರೇಗಲ್ಲ ಕಾಳಭೈರವ—ವೀರಭದ್ರ—ಹಣೆಗಣ್ಣು ತೆರೆದ ಪರಶಿವನಂತೆ ರೇಗಿದ್ದೆ. ಹಿಂದಿನ ರಾತ್ರಿ ಊಟಮಾಡಿರಲಿಲ್ಲ—ಮುಂಜಾನೆ ನಾಷ್ಟಾಕ್ಕೆ ನಾಸ್ತಿ ಆಗಿತ್ತು. ಅವಳ ಹತ್ತಿರ ರಾತ್ರಿ ಜಗಳಾಡಿದ್ದೆ. ನಾನೇನೂ ಅವಳೇ ನನ್ನನ್ನು ನಿರ್ಲಕ್ಷಿಸಿದ್ದಳು ಎಂದೆನ್ನಬಹುದು. ಎಲ್ಲಿಗೆ ಹೋಗಿದ್ದಳೊ ಬೆಳಗಾಗೆದ್ದು... ಮುಂಜಾನೆ ಮನೆ ಮುಂದೆ ತೆಳ್ಳನೆಯ ಮಲ್ಲು ಬಟ್ಟೆಯನ್ನು ಒದ್ದೆಮಾಡಿ ಹೊಟ್ಟೆಯ ಮೇಲೆ ಹಾಕಿಕೊಂಡು ಬಹಳ ಡಿಫಿಕಲ್ಟಿಯಿಂದ ಈಸಿ ಕುರ್ಚಿಯ ಮೇಲೆ ಕುಳಿತಿದ್ದೆ.

"ನಮಸ್ಕಾರ...." ಎಂದಂದು ಬಂದನೊಬ್ಬ,

"ನಮಸ್ಕಾರ. ಏನ್ರಿ ಇದು"

"ಇದು ಹಸ್ತಪತ್ರಿಕೆ– ನಮ್ಮ ಗುಡಾರದ ಗುಂಡಯ್ಯನೋರು, ಗುಣವಂತರು, ಗಟ್ಟಿಗರು, ಗಾಣಿಗರಪೇಟೆ ಗಣ್ಯರು, ಗಾಡೀಗೆ ಏರ್ಪಾಟಾಗಿದೆ—ಗಡಿಗೆ ಗಡಿಗೆ ಗಟ್ಟಿ ಮಜ್ಜಿಗೆ—ಗ್ಯಾರಂಟಿಯಾಗಿ ಅವರು ಗೆಲ್ಲಬೇಕೂಂದ್ರೆ ತಾವು ದೊಡ್ಡ ಮನಸ್ಸು ಮಾಡಬೇಕು."

"ದೊಡ್ಡ ಮನಸ್ಸಲ್ಲ ಗಟ್ಟಿ ಮನಸ್ಸೂನ್ನಿ....ಎಲ್ಲಿ ರಾಮೋತ್ಸವ ?"

"ಪುಷ್ಯಮಾಸದಲ್ಲಿ ಎಲ್ಲೀ ರಾಮೋತ್ಸವ ಸಾರ್—"

"ಮಜ್ಜಿಗೇಂತ ಅಂದ್ರೀ—ಪಾನಕ ಪೂಜೆಯೋಂತ ಹಾಗೆ ಕೇಳಿದೆ. ಏನೀಗ ತಮ್ಮ ಆಗಮನದ ವಿಷಯಾ"

"ಊರು ಕೆಟ್ಟುಹೋಯ್ತು ಸಾರ್"

"ಇನ್ನೇನಾಗತ್ತೆ ಕೆಲಸಕ್ಕೆ ಬಾರದವರೆಲ್ಲಾ ಕಾರ್ಪೋರೇಟರುಗಳಾದರೆ...."

"ಗುಂಡಣ್ಣೋರು ಹಾಗಲ್ಲ ನೋಡಿ-ಕೆಟ್ಟುಹೋದ ಊರನ್ನ ಹದಕ್ಕೆ ತರೋಕೆ ಟೊಂಕ ಕಟ್ಟಿ ನಿಂತ ಎದೆಗಾರಿಕೆ ಸಾರ್ ಅವರದೂ—ಕೊಳಚೆ—ಹಾಳುರಸ್ತೆ—

ಮುಖ್ಯ ಬಡವರ ಕೊಂಪೆ ಕಿಲೀನ್ ಮಾಡೋಕೆ ವ್ಯೈವೆತ್ತ್ರ ನಿಂತ ಮಹಾನು ಭಾವರು."

"ಇದು ನಿಜವೆ ?"

"ಸುಳ್ಳಾದರೆ ಅವರ ಮನೆ ಕೊಳ್ಳೆಹೊಡೆದುಬಿಡಿ...."

"ಇದರ ಪರೀಕ್ಷೆಯಾಗಬೇಕು"

"ಆಗಲೇಬೇಕು—ಹಾಗಾಗಬೇಕಾದರೆ ತಮ್ಮ ಘನವಾದ ಓಟನ್ನು ಅವರ ಪೆಟ್ಟಿಗೆಗೆ ಹಾಕಬೇಕು."

"ಓಟು ಹಾಕೋಕೆ ಮುಂಚೆ ನಾನು ಪರೀಕ್ಷೆ ಮಾಡಬೇಕು."

"ಹಾಗೇ ಮಾಡಿ"

"ಹಾಗಾದರೆ ಇಲ್ಲಿ ಬನ್ನಿ"

—ಎಂದು ಬಂದ ಆ ಓಟಾಪೇಕ್ಷಿಯನ್ನು ಹಿತ್ತಲಿಗೆ ಕರೆದೊಯ್ದೆ. ರಾಶಿ ರಾಶಿ ಬಿದ್ದ ಕಸ—ಕಟ್ಟಿದ ನೋರಿ ವಾಸನೆಯ ಗಲೀಜು ತುಂಬಿದ ಹಿತ್ತಲನ್ನು ತೋರಿಸಿದೆ.

"ಇದೇನು" ಎಂದ ಮೂಗುಮುಚ್ಚಿ.

"ಇದನ್ನೆಲ್ಲಾ ಕ್ಲೀನ್ ಮಾಡಿಸು ನಿಮ್ಮ ಗುಡಾರದ ಗುಂಡಯ್ಯನ ಹತ್ತಿರ ....ಗಾಣಿಗರ ಪೇಟೆಯವರು ಅಯ್ಯೋ ಅಂದ್ರೆ ನೆತ್ತಿ ತಣ್ಣಗಾಗುತ್ತದೆಯೆ ?"

"ಅದು ಸರಿ—ಇದು ಕ್ಲೀನ್ ಆಗಲೇಬೇಕು, ಅದರೆ ಕೊಳಚೆ ರಸ್ತೆಲಿದ್ದಿದ್ರೆ ಗುಂಡಯ್ಯನೋರು ಗುದ್ಲಿಯೊಡನೆ ಬರಬಹುದಾಗಿತ್ತು....ಆದರೇ ಇದು ತಮ್ಮ ಹಿತ್ತಲು....ಸ್ವಂತ ಮನೇ .. "

"ಅಲ್ಲ, ಬಾಡಿಗೆ ಮನೆ...."

"ಅದು ಸರಿ—ಕಾರ್ಪೊರೇಟರುಗಳು ಮನೆ ಮನೆ ಗುಡಿಸೋಕಾಗತ್ಯೆ—ಸಾರ್ವ ಜನಿಕ ವಿಷಯಕ್ಕೆ—ಹತ್ತೂ ಜನದ ಹಿತಕ್ಕೆ ಹೊಡೆದಾಡಿಯಾರೇ ಹೊರ್ತು ಹಿತ್ತಲ ತಿಪ್ಪೆಗೆ ಅವರು ಹೊಣೆಯೆ ?"

"ಸರಿ ನೀವು ಗಾಡಿಬಿಡಿ – ಆ ಗುಂಡಯ್ಯನಿಗೆ ನನ್ನ ಆಕರ್ಷಣೆಲಿರೋ ನೂರಾ ಹನ್ನೊಂದು ಓಟು ಬಂದಹಾಗೇ ಇದೆ....ಅಲ್ರೀ ನಮ್ಮನೆ ಹಿತ್ತಲು ಇರೋದ್ರ

ಕನ್ಸರ್‌ವೇನ್ಸಿ ರಸ್ತೆಯ ವಿಷಯಕ್ಕೆ ಕನ್ಸರ್‌ವಿಟಿವ್ ಆಗಿದ್ದು ಇದು ನಮಗೆ ಕನ್ಸರ್‌ನ್ಡ್ ಅಲ್ಲ ಅಂತ, ಕಣ್‌ಕಣ್ ಬಿಡ್ತಾ ಇರೋ ಕಾರ್ಪರೇಟರು ಖಂಡಿತ ಬೇಡ .. ಹೊರಡಿ."

—ರಾತ್ರಿಯ ರೇಗನ್ನು ಈ ಓಟು ಭಿಕ್ಷುವಿನ ಮೇಲೆ ತೀರಿಸಿದೆ. ಹೀಗೆ ಮಾತಾಡಿದಾಗ ವೈಯ್ಯಿ ಕಾವೇರಿತ್ತು. ಏರಿದ ಕಾವಿನಿಂದಾಗಿ ಹೊಟ್ಟೆಗೆ ಹತ್ತಿದ್ದ ಒದ್ದೆಬಟ್ಟೆ ಒಣಗಿ ಗರಿಗರಿಯಾಗಿಹೋಗಿತ್ತು. ಬಂದವ ಬೈದುಕೊಂಡು ಹೊರಟು ಹೋದ. ನಾನು ಮತ್ತೆ ಬಟ್ಟೆಯನ್ನು ಮಡಿಕೆ ನೀರಿನಲ್ಲಿ ಅದ್ದಿ ಹೊಟ್ಟೆಗೆ ಅಂಟಿಸಿ, ಈಸಿ ಕುರ್ಚಿಗೆ ಅಂಟಿಕೊಂಡೆ. ಹಾಗೇ ಜೋಂಪು ಹತ್ತಿತು.

* * *

"ಸಾರ್"

"ಗೊರ್—" ಗೊರಕೆಯಲ್ಲಿ ಓ ಎಂದೆ.

"ನಮಸ್ಕಾರ ಸಾರ್"

"ಗುರ್....ಗುರ್...."

"ಯಜಮಾನ್ರೇ"

"ಗುರ್ ಗೊರಕ್"

"ಈ ಮನೆಗೆ ನೀವು ಯಜಮಾನ್ರಲ್ಲವೆ? ಅಮ್ಮಾ ಅವರು ಇಲ್ಲವೇ ಅಯ್ಯ ನೋರೇ"

—ಗುದ್ದಿದ ಹಾಗಾಯ್ತು ಈ ಮಾತು. ಗೊರಕೆಯಿಂದ ಹೊಡೆದೆಬ್ಬಿಸಿತು. ಈ ಮನೆಗೆ Master ಉ Mistress ಏ ಎಂಬುದು ಈತನಿಗೆ ಹೇಗೆ ಗೊತ್ತಾಯಿತು? 'ಕ್ಯಾಕ್ಸ್‌ಟೌನಲ್ಲಿದ್ದೂ ಹೆನ್‌ಪೆಕ್ಡ್ ಆಗಿದ್ದಾನಲ್ಲಾ ಈತಾ' ಎಂದು ಹಿಂದೊಮ್ಮೆ ನನ್ನ ಹಿಂದೆ ನನಗೆ ಕೇಳಿಸುವಂತೆಯೇ ಅಂದಿದ್ದರಿಂದ ಕ್ಯಾಕ್ಸ್‌ಟೌನ್ ಬಡಾವಣೆಯಿಂದಲೇ ದೌಡಾಯಿಸಿ ಇಲ್ಲಿಗೆ ಬಂದೆ. ಇಲ್ಲೂ ಅದೇ ಬವಣೆಯೇ—

"ಅಮ್ಮಾ ಅವರಿಲ್ಲವೆ ಸಾರ್" ಮತ್ತೆ ಕುಕ್ಕಿದ ಬಂದ ಆ ಮಹಾಶಯ.

"ಯಾರ್ರಿ ಅದು—ಆಗಲಿಂದ ಕಿರ್ಲ್ತಾ ಇರೋದು ಕಿರಾತನ ಹಾಗೆ?"— ಎಂದು ಕೆರಳಿದ ಕಾಡುಪಾಪನಂತೆ ಎಗರಿಬಿದ್ದೆ. ಎದ್ದೆ ಡಿಫಿಕಲ್ಟ್ ಥೇರಿನಿಂದ.

"ನಾನು ಸಾರ್....ಆಚೆ ಬೀದಿ ಅಂಬುಜಮ್ಮನ ಮನೆ ಅಡಿಗೆಯವನು."

"ನಿನಗೇನಪ್ಪ ನಮ್ಮನ್ನ ಕಾಡಿಸೋ ಕೆಲಸ ಹಾಯಾಗಿ ಅವರ ಮನೇಲಿ ಊಟವಾಗಲಿಲ್ಲವೆ?"

"ಆದಕ್ಕಲ್ಲ ಸಾರ್— ಅಮ್ಮಾ ಅವರು ಹೇಳಿದ್ರು ನಿಮ್ಮ ಮನೆಯವರು ಇದ್ದಾರೇ ನೋಡ್ಕೊಂಡುಬಾಂತ."

"ಯಾಕಂತೆ ?"

"ನನಗೇನು ಗೊತ್ತು ಸಾರ್—ಬೆಳಿಗ್ಗೆ ಕಾರಿನಲ್ಲಿ ಪ್ರೊಪಗ್ಯಾಂಡಾಕ್ಕೆ ಹೋದವರು ಇನೂ ಬರ್ನಿಲ್ಲ–ಯಜಮಾನ್ರಿಗೆ ಬಡಿಸೋಕೆ ಹೋಗಿರಬಹುದು ನೋಡ್ಕೊಂಡು ಬಾ ಅಂತ ಅಂದ್ರು ಬಂದೆ."

"ಕಾರು—ಪ್ರೊಪಗ್ಯಾಂಡಾ—ಅಂಬುಜಮ್ಮನಿಗೆ ಇವಳ ಪ್ರಚಾರವೆ ?"

"ಅಂಬುಜಮ್ಮನವರು ಹೇಳಿದ್ರು ಅವರು ಎಲೆಕ್ಷನ್ನಿಗೆ ನಿಂತ್ರು."

"ಅಂಬುಜಮ್ಮಾ"

"ಹೂಂ ಸ್ವಾಮಿ, ಅಂಬುಜಮ್ಮನೋರಿಗೆ ಅಂಜೋ ಬೊಮ್ಮ—ಅರ್ಥಾತ್ ಭ್ರಹ್ಮಪ್ಪನವರು ಸಾರ್"

"ಓಹೊಹೋ ಹಾಗಾರೆ ಅಂಬುಜಮ್ಮನವರು ಅವರ ಗಂಡ ಹೇಳಿದಹಾಗೆ ಕೇಳ್ತಾರೆಯೋ ಬಾಣಸಿಗಯ್ಯಾ ?...."

"ಕ್ಷಮಿಸಬೇಕೂ ಸಾರ್—ಅಮ್ಮಾ ಅವರು ಕೇಳೋ ಅಂಥಾ ಮಾತ್ನೆ ಅಯ್ಯಾ ಅವರು ವಿಜ್ಞಾಪಿಸಿಕೊಳ್ಳೋದು .. ನನಗ್ಯಾಕೆ ಸಾರ್ ತಲೆಹರಟೆ—ಅಮ್ಮಾ ಅವರು ಕಾರ್ನಲ್ಲಿ ಬರಬಹುದು ಈಗ ಬಂದ ಕೂಡ್ಲೆ ಅಂಬುಜಮ್ಮನವರ ಮನೆಗೆ ಕಳಿಸಿ ಕೊಡಿ ಕಾರ್ ಸಮೇತ...."

—ಮತ್ತೆ ಬಿಸಿ ಏರಿ ಬಟ್ಟೆ ಗರಿಗರಿಯಾಯಿತು. ಮನೇಲಿ ತಿಪ್ಪೆ ಬಿದ್ದಿದ್ದರೂ ಆಚೆ ಮನೆ ಅಂಬುಜಮ್ಮನ ಕಾರ್ಪೊರೇಟರ್ ಗಿರಿಗೆ ನನ್ನ ಹೆಂಡ್ತಿ ಹೊಡೆದಾಡಬೇಕೆ ? ಬಾಣಸಿಗ ಹೊರಟುಹೋದ ಮತ್ತೆ ಹಸಿವು ಹೆಚ್ಚಿ ನಿದ್ರೆ ಆವರಿಸಿತು.

* * *

"ಸಾರ್"

"ನಿಮ್ಮನೆ ಹಾಳಾಯ್ತು ಯಾವೋನು ಅವನು ?"

"ನಾನು ಸಾರ್, ಆಫೀಸ್ ಜವಾನ"

"ಏನೋ ಅದು"

"ಕೋಟೂ ಪೇಟ ಹಾಕ್ಕೊಂಡು ಬರಬೇಕಂತೆ ಸಾರ್"

"ಯಾರೋ ಹೇಳಿದ್ದು ?"

"ಸಾಹೇಬ್ರು ಸಾರ್"

"ಯಾಕಂತೋ"

"ಸಾಹೇಬ್ರ ಅಮ್ಮ ಅವರು ಅಂಬುಜಮ್ಮನೋರ ಎಲೆಕ್ಷನ್ಗೆ ಕುಮ್ಮಕ್ಕು ಕೊಡ್ತಾ ಔರೆ—ನಮ್ಮ ಅಮ್ಮ ಅವರು ಏಳ್ದಂಗೆ ಸಾಹೇಬ್ರೂ ಅಂಬುಜಮ್ಮನವರ ಓಟಿಗೇ ಕೆಲಸಮಾಡ್ತಾರೆ— ಅವರೇ ಏಳಿದ್ದು 'ಕರ್ಕೊಂಡು ಬಾ, ಆ ಕೆಲಸಕ್ಕೆ ಬಾರದ ಮನ್ಶನ್ನ ಈ ಕೆಲಸನಾರ ಮಾಡ್ಲಿ' ಅಂತ ಏಳಿದ್ರು ಬಂದೆ ಈಗಲೇ ಬರಬೇಕು.'

—ಬಟ್ಟೆ ಗರಿಗರಿಯಾಗಿ ಕಾದು ಕೆಂಪಡಿರಿ ಸುಡುವ ಹಂತಕ್ಕೆ ಬಂತು. ಹೊರಗಡೆ ಅಂಬುಜಮ್ಮನ ಕಾರು ಪೌಂ ಎಂದಿತು. ನನ್ನಾಕೆ ನೀಲಿ ರೇಷ್ಮೆ ಸೀರೆ ಕಪ್ಪು ಮುಖಮಲ್ ಕುಪ್ಪುಸ ಬಿಳೀ ದುಂಡು ತೋಳನ್ನು ಮೆರೆಸಿಕೊಂಡು ಬಂದಳು.

"ಬರ್ತೀರೋ ಇಲ್ಲೊ?" ಎಂದು ಗದುರಿದಳು.

"ಇಲ್ಲಾಂದವರ್ಯಾರೇ"—ಎಂದು ರೇಗಿ ಕೋಟು ಏರಿಸಿದೆ. ನಮ್ಮ ಬೀದಿ ಗಂಡಸರೆಲ್ಲಾ ಅಂಬುಜಮ್ಮನ ಓಟುಗಳಿಗೇ ಶ್ರಮಿಸಿದರು ಅವರವರ ಹೆಂಡಂದಿರ ಮಾತಿನಂತೆ.

—ದಾಶರಥಿ ದೀಕ್ಷಿತ್.



ನಿಮ್ಮನೇ ಸೀಬೇಕಾಯಿಗೆ ಕ್ಯಾಟೇಬಿಲ್ಲಿನಲ್ಲಿ ನಮ್ಮ ಹುಡುಗ ಹೊಡೆದಿದ್ದು—
ನಿಮ್ಮ ಕನ್ನಡಕಾನ ಒಡೆದುಹಾಕಿತೇ!
—ಹೇಗ್ರೀ ಸಾಧ್ಯ! ನಮ್ಮ ಹುಡುಗ ಸೋದರಮಾವನ ಚುನಾವಣೆಗೆ ಓಟ್ ಫಾರ್ ಅಂತ ಕೂಗ್ತಾ ಇದಾನಲ್ರಿ!

ಒಂದು ಪ್ರಾರ್ಥನೆ

ಕಳೆದ ಕ್ರಿಸ್‌ಮಸ್ ಹಬ್ಬದ ದಿನ ಕ್ರೈಸ್ತ ಮಿತ್ರರೊಬ್ಬರು ಒಂದು ಕ್ರಿಸ್‌ಮಸ್ ಶುಭಾಶಯಗಳನ್ನು ಕೊಟ್ಟು, "ನಿನ್ನ ಪರವಾಗಿ ಚರ್ಚಿನಲ್ಲಿ ಪ್ರಾರ್ಥಿಸುತ್ತೇನೆ" ಎಂದರು. ನಾನು ಆಭಾರ ಸೂಚಿಸಿ "ಏನಂತ ಪ್ರಾರ್ಥಿಸುತ್ತೀರಿ ಎಂದು ಕೇಳಿದೆ.

"ಏನಂತ....? ಸ್ಪೆಷಲ್ಲಾಗಿ ಏನಾದರೂ ಬೇಡಿಕೊಳ್ಳುವಂಥಾದ್ದಿದೆಯೆ ?"— ಎಂದು ಕೇಳಿದರು, ಸ್ನೇಹಿತರು, ನಸುನಗುತ್ತ.

"ಮತ್ತೇನೂ ಇಲ್ಲ. ನನಗೆ ಇಲೆಕ್ಷನ್ನಿನಲ್ಲಿ ಟಿಕೇಟು ಸಿಗಬೇಕೆಂತ ಆಸೆಯಿಲ್ಲ. ನಾನು ಯಾವ ಪರೀಕ್ಷೆಗೂ ಕುಳಿತಿಲ್ಲ. ಪರದೇಶ ಪ್ರವಾಸ ಬೇಡ. ಆರೋಗ್ಯ ತಕ್ಕಮಟ್ಟಿಗೆ—ಇವತ್ತಿಗೆ ಚೆನ್ನಾಗಿದೆ. ಆದರೆ ನೋಡಿ ಆ ಎದುರುಗಡೆ ಹೋಟೆಲಿನ ರೇಡಿಯೋ ದಿನವೆಲ್ಲ ಕಿರಿಚುತ್ತಾ ಇದೆ. ಆ ಹೋಟೆಲಿನವನು ಕಂಬಿಕಿತ್ತು ಆ ಶಬ್ದ ಉಡಗಿಹೋದರೆ ನನ್ನ ಆಯುಸ್ಸು ಹತ್ತು ವರ್ಷಗಳಷ್ಟು ಕಡಿಮೆಯಾಗುವುದು ತಪ್ಪೀತು. ತಾವು ಪ್ರೀತಿಯಿಟ್ಟು ಆ ಬಗ್ಗೆ ಒಂದು ಪ್ರಾರ್ಥನೆ ನನ್ನ ಪರವಾಗಿ ಪರಮಾತ್ಮನಿಗೆ ಮುಟ್ಟಿಸಿಬಿಡಿ"—ಎಂದೆ.

ಶ್ರದ್ಧಾವಂತರಾದ ನನ್ನ ಸ್ನೇಹಿತರು "ಷ್... Silly !" ಎಂದು ನಕ್ಕು ಹೊರಟುಹೋದರು. ಅವರು ನನ್ನನ್ನು ಚೆನ್ನಾಗಿ ಬಲ್ಲವರೆನ್ನಿ. ಆದ್ದರಿಂದ ಬೇಸರಗೊಂಡಿರಬಹುದೆಂಬ ಭಯವಿಲ್ಲ. ಆದರೆ ನನ್ನ ಆಯುರಾರೋಗ್ಯ, ಯೋಗ ಕ್ಷೇಮಗಳೆಲ್ಲ ಲೌಡ್‌ಸ್ಪೀಕರನ್ನು ಕಟ್ಟಿಕೊಂಡಿರುವ ಆ ರಾಕ್ಷಸ ಯಂತ್ರದಿಂದ ಎಷ್ಟರಮಟ್ಟಿಗೆ ಜರ್ಝರಿತವಾಗಿ ಹೋಗುತ್ತಿದೆಯೆಂಬುನ್ನು ನನ್ನ ಗೆಣೆಯರು ಊಹಿಸಿರಲಾರರು. ಅತರಿಗೆ ಮಾತ್ರವಲ್ಲ, ನಿಮಗೂ ನನ್ನ ಹೇಳಿಕೆಯಲ್ಲಿ ಉತ್ಪ್ರೇಕ್ಷೆ ಕಾಣಬಹುದು. ಮನೆಯಲ್ಲಿ ರೇಡಿಯೋ ಇದ್ದು, ಸಭ್ಯ ನಾಗರಿಕರಂತೆ ಅದನ್ನು ಬಳಸಿಕೊಳ್ಳುವವರಿಗಾಗಲೀ, ರೇಡಿಯೋ ಇಟ್ಟುಕೊಂಡ ಹೋಟೆಲೊಂದು ತಮ್ಮ ಬೀದಿಯಲ್ಲಿ ಇಲ್ಲದಿರುವವರಿಗಾಗಲೀ ಹಾಗೆ ಕಾಣುವುದು ಸಹಜ. ಅಂಥವರಿಗೆ ನನ್ನ ಪಾಡು ಅರ್ಥವಾಗದು.

ಆದೊಂದು ದುರ್ದಿನ. ನಮ್ಮ ಬೀದಿಯ ಹೋಟೆಲಿನವನಿಗೆ ಒಂದು ರೇಡಿಯೋ ಕೊಂಡುಕೊಂಡು ತನ್ನ ಕೊಟ್ಟಿಗೆಯಷ್ಟಗಲದ 'ಟೀ ಕಾಫಿಕ್ಲಬ್ಬಿ'ನ ಮಂಕು ಕವಿದ ವಾತಾವರಣವನ್ನು ಹೊಡೆದೋಡಿಸಬಹುದೆಂಬ ಯೋಜನೆ ಹೊಳೆಯಿತು. ಯೋಜನೆ ಹೊಳೆಯೋದೇನು; ಇದ್ದಕ್ಕಿದ್ದ ಹಾಗೆ ಒಂದು ರೇಡಿಯೋ ಬಂತೇ ಬಂತು.

ದುರ್ದಿನ ಎಂದೆನಲ್ಲ; ಆ ದಿನ ಬೆಳಗ್ಗೆ ಆರು ಘಂಟೆಗೇ ನಮ್ಮನ್ನೆಲ್ಲ ಅದು ಎಚ್ಚರಿಸಿತು. ಏನೋ ಟ್ರ್ಯಾಕ್ಟರು ಹೋಗುತ್ತಿರಬೇಕು, ಲಾರಿ ಧಾವಿಸುತ್ತಿರಬೇಕು, ಬೆಕ್ಕುಗಳು ಜಗಳವಾಡುತ್ತಿರಬೇಕು, ಪಕ್ಕದ ಮನೆಯವರ ನಾಯಿಗೆ ಆಳು ಒಂದು ಒದೆ ಕೊಟ್ಟ—ಎಂದು ಏನೇನೋ ಊಹಿಸುತ್ತಾ ಕಣ್ಣುಜ್ಜಿಕೊಳ್ಳುತ್ತಿದ್ದ ನನಗೆ "ಪಾಕಿಸ್ತಾssssನ್ ಕೋಳಿಂಗ್" ಎಂಬ ಶಬ್ದಗಳು ಕಿವಿಗೆ ಬಿದ್ದಮೇಲೆ ಸದ್ದು ಏತರದೆಂದು ತಿಳಿಯಿತು. ಸರಿ, ಅಂದಿನಿಂದ ನಮ್ಮ ಬೀದಿಯ ಶಾಂತಿ ಕದಡಿಹೋಯಿತು. ನಮ್ಮ ಸಾಲುಮರದ ಹಕ್ಕಿಗಳೆಲ್ಲ ದೂರ ಹೋಗಿ ಗೂಡು ಕಟ್ಟಿಕೊಂಡವು. ಹಗಲೆಲ್ಲ ಬಗುಳಿಕೊಂಡು ಕಚ್ಚಾಡುತ್ತಿದ್ದ ಗ್ರಾಮ ಸಿಂಹಗಳೂ ಕೂಡ ನಾಚಿ ಸುಮ್ಮನಾದವು.

ಪ್ರತಿ ದಿನ ಬೆಳಗ್ಗೆ ಯಾವುದಾದರೂ ಒಂದು ಸ್ಟೇಷನನ್ನು ಹಿಡಿಯುವುದಕ್ಕಾಗಿ ಆತ ಪ್ರಯತ್ನಿಸತೊಡಗಿದ ಕೂಡಲೆ ನಾವು ಹಾಸಿಗೆ ಬಿಟ್ಟು ಎದ್ದುಬಿಡುತ್ತೇವೆ. ಏಕೆಂದರೆ, ಆ ಪ್ರಯತ್ನದಲ್ಲಿ ಹೊರಡುವ ಸದ್ದುಗಳನ್ನು ವರ್ಣಿಸುವಂತಿಲ್ಲ. ಬೆಳಗ್ಗೆ ಬೇಗನೆ ಏಳುವುದು ಒಳ್ಳೆಯದು ಎಂದು ನೀವು ಕುಹಕವಾಡಬಹುದು. ಆದರೆ ಬೆಳಗ್ಗೇಳುವಾಗಲೇ ಮನಸ್ಸಿಗೆ ಎಂಥ ಕರಕರೆ ಗೊತ್ತೆ? ಬೆಳಗ್ಗೇಳುವಾಗ, ಬಾಲ್ಯದಲ್ಲಿ ಅಮ್ಮ ಹೇಳಿಕೊಟ್ಟ "ಉತ್ತಿಷ್ಠೋತ್ತಿಷ್ಠ ಗೋವಿಂದ" ಮುಂತಾದ ಪುಣ್ಯಶ್ಲೋಕಗಳ ಬದಲಿಗೆ "ಥತ್ ಥತ್" ಎಂದು ನಾದ ಬ್ರಹ್ಮನನ್ನು ಶಪಿಸುತ್ತಾ ಎಡಮಗ್ಗುಲಲ್ಲೇ ಮಂಚ ಬಿಟ್ಟು ನೆಗೆಯುವುದಾಗಿದೆ ನಮ್ಮ ಪಾಡು.

ಆತನಿಗೇನಾದರೂ ತಿರುಗಿಸಿದ ಕೂಡಲೆ ಒಳ್ಳೆಯ ಸ್ಟೇಷನ್ ಸಿಕ್ಕಿದರೆ ಎರಡು ದೇವರ ನಾಮಗಳಾದರೂ ಕಿವಿಗೆ ಬೀಳುತ್ತವೆ. ಆದರೆ ಅದರಿಂದ ದೊರೆಯುವ ಸಂತೋಷವೂ ಬಹಳ ದಿನ ನಿಲ್ಲಲಿಲ್ಲ. ಎಂಥ ದೇವರ ನಾಮಗಳಾದರೂ, ತ್ಯಾಗಯ್ಯಾದಿಗಳ ಶಾಸ್ತ್ರೀಯ ಸಂಗೀತವಾದರೂ ಹೋಟೆಲ್ ರೇಡಿಯೋ ಲೌಡ್‌ಸ್ಪೀಕರಿನ ಕೈಯಲ್ಲಿ ಸಿಲುಕಿತೋ ಅದರಿಂದ ವಿಪತ್ತಲ್ಲದೆ ಬೇರೇನಿಲ್ಲವೆಂಬುದು ಈಗ ಸಿದ್ಧಾಂತವಾಗಿಬಿಟ್ಟಿದೆ. ಇನ್ನು ಪ್ರಚಾರ ಸಂಗೀತವಂತೂ ಘೋರ! ಬಲು ಘೋರ!!

ಮನೆ ಬಿಟ್ಟು ದೂರ ಹೋಗಿ ದಿನವೆಲ್ಲ ಕಳೆಯುವ ನೌಕರರಿಗೂ ವ್ಯಾಪಾರಿಗಳಿಗೂ ಈ ಪೀಡೆ ಅಷ್ಟೊಂದು ವಿಪರೀತವೆನಿಸಲಿಲ್ಲ. ಭಾನುವಾರ ಮಾತ್ರ ಅವರು ಶಪಿಸುವರು. ಆದರೆ ಆ ಬೀದಿಯಿಂದ ಕದಲದೆ ಅಲ್ಲಿಯೇ ಉದ್ಯೋಗದಲ್ಲಿರುವವರ ಗೋಳು ಹೇಳತೀರದು. ನಾನು ಅಂಥವರಲ್ಲೊಬ್ಬ. ನಮ್ಮ ಪೋಸ್ಟ್ ಮೇಷ್ಟರು ಇನ್ನೊಬ್ಬರು. ಕೇಳಿ ಕೇಳಿ ಅಭ್ಯಾಸವಾಗಿಬಿಡುತ್ತೆ ಎಂದು ತಾವೂ ಧೈರ್ಯ ತಂದುಕೊಂಡು ಇತರರಿಗೂ ಸಮಾಧಾನ ಹೇಳುತ್ತಿದ್ದರವರು. ಆದರೆ ರೇಡಿಯೋ ಅಂದರೆ ತಂತೀ ಯಂತ್ರವೆಂದು ತಿಳಿದುಕೊಂಡರಾಗುತ್ತದೆಯೇ? ಇದರ ಭರಾಟೆ ಕಿವಿಗೆ ಅಭ್ಯಾಸವಾಗಿಹೋಗಬಹುದು. ಆದರೆ ತಲೆಯ ಕೀಲು ಸಡಿಲವಾಗುತ್ತ ಬರುವುದಲ್ಲ! ಸ್ವಲ್ಪ ಸಮಯದಲ್ಲಿಯೇ ಪೋಸ್ಟ್ ಮೇಷ್ಟರು ಸ್ಥೈರಣೆ ಕಳೆದುಕೊಂಡರು. ಹೋಟಲಿ

ನವನಿಗೆ ಭರ್ಜರಿಯಾದ ಹಾಗೂ ಬಿಗುವಾದ ಒಂದು ಪತ್ರ ಬರೆದು ಅವನ ರೇಡಿಯೋ ಪೀಡೆಯನ್ನು ಖಂಡಿಸಿದರು. ಅದಕ್ಕೆ ಉತ್ತರ ಬಂದಿದ್ದು ಹೀಗೆ. ಆತ ಲೌಡ್‌ಸ್ಪೀಕರನ್ನು ಹೋಟೆಲ್ ಬಾಗಿಲಿನ ಒಂದು ಮರದ ಕೊಂಬೆಗೆ ಕಟ್ಟಿ ಅದರ ಮೂತಿಯನ್ನು ಪೋಷ್ಟಾಫೀಸಿನ ಕಡೆಗೆ ತಿರುಗಿಸಿದ. ಈತ ಪೋಲೀಸಿಗೆ ದೂರು ಕೊಟ್ಟರು. ಅಷ್ಟರಲ್ಲಿ ಹೈಕೋರ್ಟಿನವರು ಇಂಥಾದ್ದೇ ಒಂದು ಪ್ರಕರಣದಲ್ಲಿ ತೀರ್ಪು ಕೊಡುವಾಗ ರೇಡಿಯೋ ಲೌಡ್‌ಸ್ಪೀಕರುಗಳನ್ನಿಟ್ಟು ಗಲಭೆ ಮಾಡುವುದು ಕಾನ್‌ಸ್ಟಿಟ್ಯೂಷನ್ ಕೊಟ್ಟ ಹಕ್ಕು ಎಂದು ಘೋಷಿಸಿದರು. ದೇವರೇ ಗತಿ! ಈತನೆಲ್ಲಾದರೂ ಎರಡು ಲೌಡ್‌ಸ್ಪೀಕರುಗಳನ್ನಿಡುತ್ತಾನೋ ಎಂದು ನಾವೆಲ್ಲರೂ ನಡುಗಿದೆವು! ಪೋಸ್ಟ್ ಮೇಷ್ಟರು ಘಾಟಿ ಆಸಾಮಿ. T. A. ಕೂಡ ಬೇಡ ಎಂದು ಬರಕೊಟ್ಟು ಬೇರೆ ಊರಿಗೆ ಓಡಿದರು. ಆದರೆ ನಮಗೆಲ್ಲಿ ಮುಕ್ತಿ?

ಅಷ್ಟರಲ್ಲಿ ದೇವರು ಕಣ್ಣು ತೆರೆದ. ಒಂದು ದಿನ ಬೆಳಗ್ಗೆ ಇದ್ದಕ್ಕಿದ್ದ ಹಾಗೆ ಹೋಟೆಲಿನ ರೋಡಿಯೋ ಸದ್ದು ಕೇಳಿಸಲಿಲ್ಲ. ಹೊರಗೋಡಿ ನೋಡಿದರೆ ಅದರ ಬಾಗಿಲು ಹಾಕಿತ್ತು. ಸಮಾಚಾರ ಏನೆಂದರೆ ಹೋಟೆಲು ದಿವಾಳಿಯಾಗಿತ್ತು. ರೇಡಿಯೋ ಸದ್ದಿನ ಭರಾಟೆಯಲ್ಲಿ ಬಿಸಿ ನೀರನ್ನೇ ಕಾಫಿಯೆಂದು ಕೊಟ್ಟರೂ ಯಾರಿಗೂ ತಿಳಿಯುವುದಿಲ್ಲವೆಂದು ನಂಬಿ ಆತ ಕೆಟ್ಟನೋ ಏನೋ ಅಂತೂ ಪೀಡೆ ತೊಲಗಿತು. ಬೀದಿಯವರೆಲ್ಲ ಆಂಜನೇಯ ಸ್ವಾಮಿಗೆ ಹಣ್ಣುಕಾಯಿ ಕಳುಹಿಸಿದೆವು.

ಆದರೆ, ಭಗವಾನ್, ನಮ್ಮ ನೆಮ್ಮದಿಯ ಕನಸು ನೀರಾಗಿಹೋಯಿತು. ಇನ್ನೊಂದು ದಿನ ಬೆಳಗ್ಗೆ ಇದ್ದಕ್ಕಿದ್ದಹಾಗೆ "ಪಾಕಿಸ್ತಾನ್ ಕೋಳಿಂಗ್" ಕೇಳಿಸಿತು. ನೋಡಿದರೆ ಹೋಟಲಿನ ಬಾಗಿಲಿಗೆ ಮಾವಿನಸೊಪ್ಪು ಕಟ್ಟಿತ್ತು. ಹೊಸ ಬೋರ್ಡು ನೇತಾಡುತ್ತಿತ್ತು. ಅದನ್ನು ಬೇರೆ ಯಾರೋ ವಹಿಸಿಕೊಂಡಿದ್ದರು. ಈತನಾದರೂ ಕಿವಿಯಿದ್ದ ಕರುಣಾಳುವಿರಬಹುದೆಂದುಕೊಂಡ ನನ್ನ ಆಶಾವಾದ ಪುಡಿಯಾಯಿತು. ಮೊದಲಿನಾತ ರಾತ್ರಿ ಎಂಟಕ್ಕೆ ರೇಡಿಯೋ ನಿಲ್ಲಿಸುತ್ತಿದ್ದ. ಈತ ರಾತ್ರಿ ಹತ್ತಾದರೂ ನಿಲ್ಲಿಸುವುದಿಲ್ಲ. ಮಧ್ಯಾಹ್ನ ಊಟದ ಹೊತ್ತಿನಲ್ಲಿ ಕೂಡ ಮಾಣಿಯೊಬ್ಬನ ಛಾರ್ಜಿನಲ್ಲಿರುತ್ತದೆ ರೇಡಿಯೋ. ಆ ಮಹಾನುಭಾವನೋ ಕೇವಲ ಐದೇ ನಿಮಿಷಗಳಲ್ಲಿ ಹತ್ತು ಸ್ಟೇಷನ್‌ಗಳಿಗೆ ತಿರುಗಿಸಿ ನಾದ ಬ್ರಹ್ಮನ ವಿಶ್ವರೂಪ ದರ್ಶನ ಮಾಡಿಸುವ ಘಟಾನುಘಟಿ! ಮಧ್ಯಾಹ್ನ ಹತ್ತು ನಿಮಿಷ ಮಲಗಿದರೆ ನರಕವನ್ನೇ ಕಿವಿ ಮೂಲಕ ತಲೆಗೆ ತುಂಬುವ ಪ್ರವೀಣ! ಸಾಲದ್ದಕ್ಕೆ ಮಕ್ಕಳ ಬಾಯಲ್ಲಂತೂ ಬೇರೆಬೇರೆ ಪೌಡರು, ಮಾತ್ರೆ, ಸಾಬೂನು ಸಿಲ್ಕು, ಮಣ್ಣು ಮಸಿಗಳ ಪ್ರಚಾರ ವಾಕ್ಯಗಳು ನಿಂತು ಹೋಗಿಬಿಟ್ಟಿವೆ. ಆ ಪ್ರಚಾರ ವೈಖರಿಯ ಅನುಕರಣೆ ಪ್ರಿಯವಾಗಿ ಅವುಗಳಿಗೆ ಒಳ್ಳೆಯ ಹಾಡು ಬಾಯಿಯಿಂದ ಹೊರಡುವುದಿಲ್ಲ. ನಾವು ಎಲ್ಲ ಬಗೆಯ ಸಂಗೀತವನ್ನೂ ದ್ವೇಷಿಸುವ ಸ್ಥಿತಿಗೆ ಬಂದಿದ್ದೇವೆ. ನಮಗೀಗ ಅತ್ಯಂತ ಹಿತವಾದ ರಾಗ

ವೆಂದರೆ ಮೌನ ರಾಗ! ಅತ್ಯಂತ ಪ್ರಿಯವಾದ ತಾಳವೆಂದರೆ ಸ್ತಬ್ಧ ತಾಳ! ಬೆಳಗ್ಗೆ ಏಳುವಾಗ ಯಾವ ವಾದ್ಯ, ಯಾವ ದೇವರ ನಾಮ, ಯಾವ ಗವಾಯಿ ಸಂಗೀತವೂ ನಮಗೆ ಬೇಡ. ಎತ್ತಿನ ಗಾಡಿಗಳ ಚಕ್ರದ ಸದ್ದು, ಎತ್ತಿನ ಕೊರಳಿನ ಗಂಟೆಯ ಧ್ವನಿ, ಹಕ್ಕಿಗಳ ಚಿಲಿಪಿಲಿ, ಅರಳಿ ಮರದ ಎಲೆಗಳ ಮರ್ಮರ ಧ್ವನಿ— ಇವಿಷ್ಟು ಬೆಳಗ್ಗೇಳುವ ಹೊತ್ತಿಗೆ ಕಿವಿಗೆ ಬಿದ್ದರೆ ಸಾಕು—ಎಂದು ಹಾತೊರೆಯುತ್ತಿದ್ದೇವೆ.. ಎಲ್ಲಿದೆ ಆ ಸ್ವರ್ಗ? ಇನ್ನೆಂದಿಗೆ ಆ ಸುಖ?

ವಿಶ್ವಾಸದ ಬಂಧುಗಳು ಬಂದರೆ ಒಂದು ದಿನ ಕೂಡ ನಿಲ್ಲುವುದಿಲ್ಲ. ಪ್ರೀತಿಯ ಸ್ನೇಹಿತರು ಬಂದ ಐದೇ ನಿಮಿಷದಲ್ಲಿ ಅವಸರವಸರವಾಗಿ ಓಡುತ್ತಾರೆ. ನನ್ನೊಡನೆ ಒಂದು ದಿನ ಕಳೆದವನೆಂದರೆ ಒಬ್ಬ ಗೆಳೆಯಮಾತ್ರ. ಆತ ಕವಿ. ಆತ ನಮ್ಮಲ್ಲಿದ್ದು ಒಂದು ದುಃಖಗೀತೆ ಬರೆದ. ಶೋಕದಿಂದ ತಾನೆ ಶ್ಲೋಕ ಬರುವುದು! ಓದಿದೆ. ಮರುಗಿದೆ. ಪದ್ಯದಿಂದಾಗಿಯಲ್ಲ. ಪದ್ಯಕ್ಕೆ ಸ್ಫೂರ್ತಿಕೊಟ್ಟ ಆ ರೇಡಿಯೋವನ್ನು ನೆನಸಿಕೊಂಡು. ಒಳ್ಳೆಯ ರೇಡಿಯೋ ಕೊಂಡುಕೊಳ್ಳಬೇಕೆಂದು ಒಂದು ತ್ರೈವಾರ್ಷಿಕ ಯೋಜನೆ ಕೈಕೊಂಡಿದ್ದೆ. ಅದು ಸದ್ಯದಲ್ಲಿಯೇ ಪೂರ್ತಿಯಾಗುವುದರಲ್ಲಿದೆ. ಆಗ ರೇಡಿಯೋ ಕೊಂಡುಕೊಳ್ಳುತ್ತೇನೆಯೆ? ಇಲ್ಲ ಇಲ್ಲ! ಒಂದು Hearing Aid ಅಂತಾರಲ್ಲ—ಅದನ್ನು ಕೊಂಡುಕೊಳ್ಳುತ್ತೇನೆ. ಈ ನಡುವೆ ನನ್ನ ಸ್ನೇಹಿತರು ಚರ್ಚಿನಲ್ಲಿ ನನ್ನ ಪರವಾಗಿ ಏನಂತ ಪ್ರಾರ್ಥಿಸುತ್ತಾರೋ ನೋಡಬೇಕು. ಅವರೇನಾದರೂ ನನ್ನ ಪರಿಸ್ಥಿತಿಗೆ ಸಹಾನುಭೂತಿ ತೋರಿಸಿ ಸರಿಯಾಗಿ ಪ್ರಾರ್ಥಿಸಿದರೆ, ಪರಮಾತ್ಮ ಅದನ್ನು ನಡೆಸಿಕೊಟ್ಟರೆ, ನಮ್ಮ ಹೋಟಲಿನ ಸದ್ದಡಗಿದರೆ, ಆಗ ಕೂಡ ರೇಡಿಯೋ ಕೊಂಡುಕೊಳ್ಳುವುದಿಲ್ಲ. ಹಿಮಾಲಯದ ತಪ್ಪಲಿಗೆ ಯಾತ್ರೆ ಹೋಗಿ ಅಲ್ಲಿ ಕೆಲವು ದಿನ ನೆಲೆಸಿ ಶಾಂತಿಯ ಅಮೃತವನ್ನು ಹೀರಿ ಭೂತಕಾಲದ ಈ ಭೂತವನ್ನು ಮರೆಯುತ್ತೇನೆ.

— ರಾಮಿ.

ಅ. ಭಾ. ಸರ್ವ ಸಮ್ಮೇಳನಕ್ಕೆ ಹೊಸನಗರಕ್ಕೆ ಬಂದವನೊಬ್ಬ, ಸಂಧ್ಯೆಯಲ್ಲಿ ಟ್ಯಾಕ್ಸಿಯಲ್ಲಿ ಕುಳಿತು, ಸಾರಥಿಗೆ ಹೇಳಿದನಂತೆ—"ಗಂಟೆಲೋಣಗುತ್ತಿದೆ—ಬೇಗ ಮಹಾತ್ಮಾಗಾಂಧೀ ರಸ್ತೆಗೆ ಗಾಡಿ ಬಿಡು, ಬಾರ್ ಹತ್ತಿರ ಇಳಿಸು ಎಂದು; ಪ್ರಾತಃ ಸಂಧ್ಯಾಕಾಲದಲ್ಲಿ, ೬-೩೦ ಗೆ ಊರಿಗೆ ಬಂದು, ೮ ಗಂಟೆಯ ವೇಳೆಗೆ.

ಕೊರವಂಜಿ

ಬಳೇಪೇಟೆ : : ಬೆಂಗಳೂರು 2

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ. ತಿಳಿಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು ಇವುಗಳಿಗೆ ಸರ್ವದಾ ಸುಸ್ವಾಗತ ವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪು ನೆಪ್ಪುಗಳು ಕಡಿಮೆಯಾಗುವುವು ಒಪ್ಪಿದ ಲೇಖನಗಳಿಗೆ ಪ್ರತ್ಯುತ್ತರ ಉಂಟು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ, ವ್ಯವಸ್ಥಾಪಕರಲ್ಲಿ ಮಿಕ್ಕ ವಿಚಾರಗಳನ್ನೂ ಪ್ರಸ್ತಾಪಿಸಬೇಕು.

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೩-೦೦

ಬಿಡಿ ಪ್ರತಿ ಕೇವಲ ೨೫ ನ.ಪೈ.

ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ, ಕೂಡಲೆ ನಮಗೆ ತಿಳಿಸಿದರೆ ಬಹಳ ಸಹಾಯ ಮಾಡಿದಂತಾಗುವುದು.

Printed by B. S. Iyengar, Bangalore City

Publisher—B. N. Gupta. Editor—M. Sivaram.